# ಬೃಹಚ್ಚರಣ

ಸಂಘದ ತ್ರೈಮಾಸಿಕ ವಾರ್ತಾ ಪತ್ರಿಕೆ



| ಸಂಘದ ಸದಸ್ಯರಾಗಿ | |
|---|---|
| ಮಹಾ ಪೋಷಕರು | – ₹ 25,000/– |
| ಪೋಷಕರು | – ₹ 5,000/– |
| ಸದಸ್ಯತ್ವ | – ₹ 1,000/– |
| ವಾರ್ಷಿಕ ನಿರ್ವಹಣೆ | – ₹ 500/– |



ಸಂಪುಟ : 14 ಸಂಚಿಕೆ : 2 ಖಾಸಗಿ ಪ್ರಸಾರಕ್ಕಾಗಿ ಏಪ್ರಿಲ್–ಆಗಸ್ಟ್ 2023

E-mail : queries@mmdbs.in magazines@mmdbs.in web : www.mmdbs.in


## ಸರ್ವಸದಸ್ಯರ ಸಭೆ ವಿಶೇಷಾಂಕ




## ಅಧ್ಯಕ್ಷರ ನುಡಿ

ಬಂಧುಮಿತ್ರರೇ ನಮಸ್ಕಾರಗಳು!

ಸರ್ವ ಸದಸ್ಯರ ಸಭೆಯನ್ನು ಯಶಸ್ವಿಗೊಳಿಸಿದ್ದಕ್ಕಾಗಿ ಎಲ್ಲರಿಗೂ ಧನ್ಯವಾದಗಳು.

ಕಳೆದ ನಾಲ್ಕು ವರ್ಷಗಳಿಂದ ಈ ಸಂಘದ ಅಧ್ಯಕ್ಷನಾಗಿ ಯಥಾಶಕ್ತಿ ಸೇವೆ ಸಲ್ಲಿಸಿರುತ್ತೇನೆ. ವೈಯುಕ್ತಿಕ ಕಾರ್ಯಭಾರಗಳ ನಿಮಿತ್ತ ಈ ಕರ್ತವ್ಯವನ್ನು ನಿರ್ವಹಿಸುವುದು ಇನ್ನು ಮುಂದೆ ನನಗೆ ಅಸಾಧ್ಯವಾಗಿರುತ್ತದೆ. ಹೀಗಾಗಿ ಸರ್ವ ಸದಸ್ಯರ ಸಭೆಯ ಅನುಮೋದನೆಯೊಂದಿಗೆ ಈ ಜವಾಬ್ದಾರಿಯನ್ನು ಹಿತೈಷಿ ಪೋಷಕ ಶ್ರೀ ಸೋಮಸುಂದರ ಅವರು ವಹಿಸಿಕೊಂಡಿರುತ್ತಾರೆ. ಶ್ರೀಯುತರಿಗೆ ಕೃತಜ್ಞತಾಪೂರ್ವಕ ಧನ್ಯವಾದಗಳು.



ನಾನು ಕಾರ್ಯಕಾರಿ ಸಮಿತಿಯ ಸದಸ್ಯನಾಗಿ ಮುಂದುವರೆದು ಸಂಘದ ಯಶಸ್ಸಿಗೆ ಸಹಕರಿಸುತ್ತೇನೆ.

ವಂದನೆಗಳು

– ಬಿ. ಸುಬ್ರಹ್ಮಣ್ಯಂ, ಅಧ್ಯಕ್ಷರು

## ಕಾರ್ಯದರ್ಶಿ ನುಡಿ



ಪ್ರಿಯ ಸದಸ್ಯರೇ,

ಎಲ್ಲರಿಗೂ ನಮಸ್ಕಾರಗಳು

"ಬೃಹಚ್ಚರಣ"ದ ನೂತನ ಸಂಚಿಕೆಯನ್ನು ತಮ್ಮೆಲ್ಲರ ಮುಂದಿಡಲು ಸಂತಸವಾಗುತ್ತಿದೆ.

– ಎಸ್.ಸಿ. ಶ್ರೀನಿವಾಸ, ಕಾರ್ಯದರ್ಶಿ

ಪುಟ 3>>

## ವಾರ್ಷಿಕ ನಿರ್ವಹಣಾ ವೆಚ್ಚ (AMF) – ಸಮುದಾಯದ ಸದಸ್ಯರಲ್ಲಿ ಮನವಿ

ಬೃಹಚ್ಚರಣ ಸಂಘವು 2010ರಲ್ಲಿ ಪುನಶ್ಚೇತನಗೊಂಡಾಗ ಸದಸ್ಯರಿಂದ AMF ಆಗಿ ರೂ. 250/– ಪಡೆಯಬೇಕೆಂದು ಕಾರ್ಯಕಾರಿ ಸಮಿತಿ ನಿರ್ಧರಿಸಿದ ವಿಚಾರ AGMನಲ್ಲಿ ಅನುಮೋದನೆಯಾಗಿತ್ತು. ನಂತರ 2014ರಲ್ಲಿ AMF ಮೊತ್ತವನ್ನು ರೂ 500/–ಕ್ಕೆ ಹೆಚ್ಚಿಸಿತ್ತು. ಇದನ್ನು ಸತತವಾಗಿ ಸಂಘಕ್ಕೆ ಸಂದಾಯ ಮಾಡುತ್ತಾ ಬಂದಿರುವ ಸದಸ್ಯರಿಗೆ ಸಮಿತಿಯು ಧನ್ಯವಾದ ತಿಳಿಸಲು ಬಯಸುತ್ತದೆ. ಪ್ರಸ್ತುತ ಬ್ಯಾಂಕಿನಲ್ಲಿ ಬಡ್ಡಿ ದರಗಳ ಏರುಪೇರಾಗುತ್ತಿದೆ ಮತ್ತು ಸಂಘಕ್ಕೆ ನಿರ್ವಹಣೆಯ ಜವಾಬ್ದಾರಿ ಇರುವುದರಿಂದ ಸದಸ್ಯರಲ್ಲಿ ಮನವಿ ಮಾಡುವುದೇನೆಂದರೆ ವಾರ್ಷಿಕ ನಿರ್ವಹಣಾ ವೆಚ್ಚವನ್ನು 2021–22 ಮತ್ತು 2022–23ರ ಸಾಲಿಗಾಗಿ ಪಾವತಿಸದ ಸದಸ್ಯರು ದಯಮಾಡಿ ದಿನಾಂಕ 31.10.2023ರ ಒಳಗೆ ಪಾವತಿಸಲು ಕೋರುತ್ತದೆ. ಸದಸ್ಯರ ಪೂರ್ಣ ಸಹಕಾರದೊಂದಿಗೆ ಇದುವರೆಗೂ ಸಂಘವು ಸಮುದಾಯಕ್ಕಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸಾಧ್ಯವಾಗುತ್ತಿದೆ. ಹೆಚ್ಚು ಸದಸ್ಯರು AMF ಜೊತೆಗೆ ಸ್ವ ಇಚ್ಛೆಯಿಂದ ಸಂಘದ ಕಾರ್ಯ ಚಟುವಟಿಕೆಗಳಿಗೆ ಉದಾರವಾಗಿ ದೇಣಿಗೆ ನೀಡುತ್ತಾ ಬಂದಿರುವುದನ್ನು ಇಲ್ಲಿ ಸ್ಮರಿಸುತ್ತೇವೆ ಹಾಗೂ ಧನ್ಯವಾದವನ್ನು ತಿಳಿಸುತ್ತೇವೆ. 2021–22 ಮತ್ತು 2022–23 ಸಾಲಿಗಾಗಿ ಸಲ್ಲಿಸುವ AMF ಮೊತ್ತವನ್ನು ಸಂಘದ ಈ ಕೆಳಕಂಡ ಬ್ಯಾಂಕ್ ವಿವರಗಳು ಅಥವಾ QR ಕೋಡ್ ಬಳಸಿ ಸಂದಾಯ ಮಾಡಬಹುದು ಅಲ್ಲದೆ ಕಾರ್ಯಕಾರಿ ಸಮಿತಿ ಸದಸ್ಯರ ಮೂಲಕ ಕೂಡ ಪಾವತಿ ಮಾಡಬಹುದು. ಇದಕ್ಕಾಗಿ ರಸೀದಿಯನ್ನು ಪಡೆದುಕೊಳ್ಳಬೇಕಾಗಿ ವಿನಂತಿ.

Bank Details: Mysore Manjapattur Dravida Bruhachharana Sangha
A/c No: 1065101119457
IFSC: CNRB 0001065
CANARA BANK,
CHANDAPURA BRANCH,
ANEKAL,
BENGALURU RURAL.
UPI ID NO: 90574090119457@cnrb

**AMF/ನಾಗಾರಾಧನೆ/ಅನ್ನ ಸಂತರ್ಪಣೆ/ವಿದ್ಯಾನಿಧಿ/ಸದಸ್ಯತ್ವಕ್ಕಾಗಿ ಈ ಖಾತೆಗೆ ಹಣವನ್ನು ವರ್ಗಾಯಿಸಬಹುದು**

# 75 ವಸಂತಗಳನ್ನು ಪೂರೈಸಿದ ಹಿರಿಯ ಚೇತನರಿಗೆ ಗೌರವ

ಚಿತ್ರ ಕೃಪೆ : ಕೆ.ಸಿ. ನಟರಾಜನ್




ಶ್ರೀಮತಿ ಸರಸ್ವತಿ ಮತ್ತು ಶ್ರೀ ವೈ.ಜಿ. ಗಿರಿಶಾಸ್ತ್ರಿ, ಶ್ರೀಮತಿ ಅರುಣಾ ಮತ್ತು ಶ್ರೀ ಸಿ.ಎಸ್. ಶ್ರೀನಿವಾಸಮೂರ್ತಿ, ಶ್ರೀಮತಿ ಪದ್ಮಿನಿ ರಾಜನ್ ಮತ್ತು ಕರ್ನಲ್ ವಿ. ಜಿ. ರಾಜನ್




ಶ್ರೀಮತಿ ಪುಷ್ಪ ಮತ್ತು ಶ್ರೀ ಎಸ್.ಆರ್. ರಾಧಾಕೃಷ್ಣ, ಶ್ರೀ ಎಸ್. ಶಿವಪ್ರಕಾಶ್, ಶ್ರೀಮತಿ ವಸುಂಧರಾ ಮತ್ತು ಶ್ರೀ ವಿ. ಶಾಂತಾರಾಮ್




ಶ್ರೀಮತಿ ಮೀನಾಕ್ಷಿ ವೆಂಕಟೇಶ್ ಮತ್ತು ಶ್ರೀ ಜಿ. ವೆಂಕಟೇಶ್, ಶ್ರೀಮತಿ ಎಸ್. ರುಕ್ಮಿಣಿ ಮತ್ತು ಶ್ರೀ ಕೆ.ಜಿ. ಶ್ರೀನಿವಾಸ್




ಶ್ರೀಮತಿ ಶಾಂತಾ, ಶ್ರೀಮತಿ ಮಮತಾ ಶ್ರೀನಿವಾಸ್

## ಮೈ.ಮಂ.ದ್ರಾ.ಬೃಹಚ್ಚರಣ ಸಂಘ

**(ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಂಗ ಸಂಸ್ಥೆ)**

### ನೂತನ ಕಾರ್ಯಕಾರಿ ಸಮಿತಿ

**ಎಸ್. ಸೋಮಸುಂದರ, 9900113298**
ಅಧ್ಯಕ್ಷರು
**ಎಸ್. ಸತ್ಯನಾರಾಯಣ, 9980945699**
ಉಪಾಧ್ಯಕ್ಷರು
**ಎಸ್.ಸಿ. ಶ್ರೀನಿವಾಸ, 9483725949**
ಕಾರ್ಯದರ್ಶಿ
**ಹೆಚ್.ಕೆ. ಶಶಿಧರ್, 9845173766**
ಸಹ ಕಾರ್ಯದರ್ಶಿ
**ವಿ. ಅರುಣ್, 9880166001**
ಖಜಾಂಚಿ
**ಎನ್. ಶಿವ ಕುಮಾರ್, 9886505505**
ಆಂತರಿಕ ಲೆಕ್ಕ ಪರಿಶೋಧಕರು

**ಸದಸ್ಯರು**

**ಜಿ. ವೆಂಕಟೇಶ್, 9916067503**
**ಕೆ. ಗುಂಡಪ್ಪ, 9845332315**
**ಕೆ.ಬಿ.ಎಸ್. ಶರ್ಮ, 9482087344**
**ಬಿ. ಸುಬ್ರಹ್ಮಣ್ಯಂ, 9449869667**
**ಆರ್. ಗಣೇಶ್ ಶ್ರೀಧರ್, 9880187686**
**ನಾಗೇಶ, 9980662118**
**ಟಿ.ಪಿ. ಸೂರ್ಯನಾರಾಯಣ್, 9945484268**
**ಕೆ. ಮಂಜುನಾರಾಯಣ್, 9886114279**
**ಕೆ.ಎಸ್. ಅರುಣ್, 9900313929**
**ಕೆ.ಎಸ್. ಅನಂತ, 9740444222**
**ಆರ್. ರಮೇಶ್, 9886034048**
**ಹೆಚ್.ಆರ್. ಲಲಿತಾ, 9945199637**
**ಆರ್.ಎ.ಶ್ಯಾಮಸುಂದರ್, 9845205674**
**ಆರ್.ಪಿ. ರವಿಶಂಕರ್, 9449696664**

**ಲೆಕ್ಕ ಪರಿಶೋಧಕರು**

**ಬಿ.ಎನ್. ಗೋವಿಂದ ಪ್ರಸಾದ್, 9845128229**

**"ಬೃಹಚ್ಚರಣ" ಪತ್ರಿಕೆಯ ಸಂಪಾದಕ ಮಂಡಳಿ**
**ಸಂಘದ ಅಧ್ಯಕ್ಷರು ಹಾಗೂ ಕಾರ್ಯದರ್ಶಿ**

**ಆರ್. ರಮೇಶ್, 9886034048**
ಸಂಪಾದಕರು

**ಹೆಚ್.ಆರ್. ಲಲಿತಾ, 9945199637**
ಸದಸ್ಯರು

**ಎನ್. ಶಿವ ಕುಮಾರ್, 9886505505**
ಛಾಯಾಗ್ರಾಹಕರು

### ಕಾರ್ಯದರ್ಶಿ ನುಡಿ

<<ಪುಟ 1

ಕಳೆದ ಜುಲೈ 23 ಭಾನುವಾರದಂದು ನಡೆದ ಸರ್ವ ಸದಸ್ಯರ ವಾರ್ಷಿಕ ಸಭೆಯಲ್ಲಿ ನೀವುಗಳು ಭಾಗವಹಿಸಿ ಸಮಾರಂಭವನ್ನು ಯಶಸ್ವಿಗೊಳಿಸಿದಿರಿ. ಆ ದಿನ "ಹಿರಿಯ ಚೇತನರಿಗೆ ಸನ್ಮಾನ" ಹಾಗೂ "ಪ್ರತಿಭಾ ಪುರಸ್ಕಾರ" ಗಳು ಸೊಗಸಾಗಿ ಮೂಡಿಬಂದವು. ಅವುಗಳಲ್ಲಿ ಭಾಗವಹಿಸಿದ ಎಲ್ಲರಿಗೂ ಧನ್ಯವಾದಗಳು.

**ಕಳೆದ ಹತ್ತು ವರ್ಷಗಳಲ್ಲಿ "ಪ್ರತಿಭಾ ಪುರಸ್ಕಾರ"ಕ್ಕೆ ಭಾಜನರಾಗಿರುವ ಎಲ್ಲ ಯುವಕ ಯುವತಿಯರು ಸಂಘದ ಸದಸ್ಯತ್ವವನ್ನು ಪಡೆದುಕೊಳ್ಳಬೇಕೆಂದು, ತನ್ಮೂಲಕ "ವಿದ್ಯಾನಿಧಿ" ಯೋಜನೆಯಡಿ ಸಂಘವು ಸದಸ್ಯರಿಗೆ ಇನ್ನೂ ಹೆಚ್ಚು ಉಪಯುಕ್ತವಾಗುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ನೆರವಾಗಬೇಕೆಂದು ಮನವಿಮಾಡಿಕೊಳ್ಳುತ್ತೇನೆ.**

ಕುಟುಂಬಗಳಲ್ಲಿ ಪ್ರೀತಿಪಾತ್ರರ ಮರಣಗಳು ಸಹಜ. ಅಂಥಹ ದುಃಖದ ಸಂದರ್ಭಗಳಲ್ಲಿ ನಮ್ಮ ಸಮುದಾಯದ ಶೋಕತಪ್ತ ಪರಿವಾರದವರಿಗೆ ಸಂಘದಿಂದ ಸೂಕ್ತ ರೀತಿಯಲ್ಲಿ ಸಾಂತ್ವನ ನೀಡುವುದಕ್ಕಾಗಿ ಈ ವರ್ಷದ ಏಪ್ರಿಲ್ ಒಂದರಿಂದ ಜಾರಿಗೆ ಬಂದಿದೆ. ಇದುವರೆಗೂ ನಮ್ಮ ಸಮುದಾಯದಲ್ಲಿ ವಿಯೋಗ ಸಂಭವಿಸಿದ ಹತ್ತು ಕುಟುಂಬಗಳಿಗೆ ಕಾರ್ಯಕಾರಿ ಸಮಿತಿ ಸದಸ್ಯರು ಭೇಟಿ ನೀಡಿ ಸಂಘದ ವತಿಯಿಂದ ಸಾಂತ್ವನ ನೀಡಿ ಪ್ರತಿ ಕುಟುಂಬಕ್ಕೂ ನಿಗದಿತ ಮೊತ್ತವನ್ನು ನಮ್ರತೆ, ಗೌರವಗಳಿಂದ ಸಲ್ಲಿಸಿರುತ್ತೇವೆ. ಮುಂಬರುವ ವರ್ಷಗಳಲ್ಲಿ ಈ ಯೋಜನೆಯು ಯಶಸ್ವಿಯಾಗಿ ಕಾರ್ಯಗತಗೊಳ್ಳಲು ಅವಶ್ಯವಿರುವ ಸಂಪನ್ಮೂಲವು ಪೂರ್ಣವಾಗಿ ಬ್ಯಾಂಕ್ ಠೇವಣಿಗಳಿಂದಲೇ ಉತ್ಪತ್ತಿಯಾಗ ಬೇಕಾಗಿರುವ ಕಾರಣ, ಈ ನಿಧಿಗೆ ಸದಸ್ಯರಿಂದ ಉದಾರ ಕೊಡುಗೆಯನ್ನು ಕೋರುತ್ತೇನೆ.

ಧನ್ಯವಾದಗಳು, ವಂದನೆಗಳು

– ಎಸ್.ಸಿ. ಶ್ರೀನಿವಾಸ

*****************************************************

### ನೂತನ ಅಧ್ಯಕ್ಷರ ನುಡಿ

ಬೃಹಚ್ಚರಣ ಸಂಘದ ಸದಸ್ಯರಿಗೆ ನನ್ನ ನಮಸ್ಕಾರಗಳು!

ಶ್ರೀ ಸುಬ್ರಹ್ಮಣ್ಯಂ ಅವರ ಕೋರಿಕೆಯನ್ನು ಮನ್ನಿಸಿ, ನಿಮ್ಮೆಲ್ಲರ ಅನುಮೋದನೆಯ ಬಲದ ಮೇಲೆ ನಾಲ್ಕು ವರ್ಷಗಳ ನಂತರ ಮತ್ತೊಮ್ಮೆ ಅಧ್ಯಕ್ಷ ಪದವಿಯನ್ನು ವಹಿಸಿಕೊಂಡಿರುತ್ತೇನೆ. ಕಾರ್ಯಕಾರಿ ಸಮಿತಿಯ ಸದಸ್ಯರ ಸಹಕಾರದಿಂದ ಹಾಗೂ ನಿಮ್ಮೆಲ್ಲರ ಬೆಂಬಲ, ಶುಭಕಾಮನೆಗಳಿಂದ ಈ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಬಲ್ಲೆನೆಂಬ ವಿಶ್ವಾಸ ನನಗಿದೆ.

ಸಂಘದ ಕಾರ್ಯನಿರ್ವಹಣೆಗೆ ನೆರವಾಗುವಂತೆ ಆಡಳಿತ ಮಂಡಳಿ (Office Bearers) ಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಲಾಗಿದೆ. ವಿವರಗಳನ್ನು ಕಾರ್ಯಕಾರಿ ಸಮಿತಿ ಪಟ್ಟಿಯಲ್ಲಿ ಕಾಣಿಸಲಾಗಿದೆ.

ಕಳೆದ ಮೂರು ವರ್ಷಗಳಿಂದ ಸಾಧ್ಯವಾಗದಿದ್ದ ಒಂದುದಿನದ ಪ್ರವಾಸವನ್ನು ಈ ವರ್ಷ ನೀವುಗಳು ಎದುರು ನೋಡುತ್ತಿರುವಿರಿ ಎಂದು ಬಲ್ಲೆ. ಈ ಕಾರ್ಯಕ್ರಮವನ್ನು ಈ ವರ್ಷದಲ್ಲಿ ಆಯೋಜಿಸುವ ಉದ್ದೇಶವಿದೆ.

ಸಂಘದ ನೋಂದಣಿಯು ಇದುವರೆಗೂ ಪ್ರತಿವರ್ಷವೂ ಕ್ರಮಬದ್ಧವಾಗಿ ನವೀಕರಣಗೊಳ್ಳುತ್ತಲಿದೆ. ಈ ವರ್ಷವೂ ಇಷ್ಟರಲ್ಲಿಯೇ ನವೀಕರಣಗೊಳ್ಳಲಿದೆ.

ವಂದನೆಗಳು



**–ಎಸ್. ಸೋಮಸುಂದರ**

# ಸಂಘದ 2022-23ನೇ ಸಾಲಿನ ಸರ್ವ ಸದಸ್ಯರ ಸಭೆಯ ವರದಿ



ಸಂಘದ 2022–23ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಸಭೆ ಭಾನುವಾರ ದಿನಾಂಕ 23.7.2023ರಂದು ಬಸವನಗುಡಿಯ ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದ ಆವರಣದಲ್ಲಿರುವ ಶ್ರೀ ಭ್ರಮರಾಂಬಿಕ ಸದನದಲ್ಲಿ ನಡೆಯಿತು.

ಈ ಬಾರಿಯ ವಿಶೇಷ ಎಂಬಂತೆ ಬೆಳಿಗ್ಗೆ ಏಳಕ್ಕೆ ಸಂಘದ ವತಿಯಿಂದ ಎಲ್ಲಾ ಸದಸ್ಯರ ಒಳಿತಿಗಾಗಿ ಶ್ರೀ ಸತ್ಯನಾರಾಯಣ ಸ್ವಾಮಿ ಪೂಜೆಯನ್ನು ಆಯೋಜಿಸಲಾಗಿತ್ತು. ಸಂಘದ ಹಿರಿಯರು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಗುಂಡಪ್ಪನವರು ಮತ್ತು ಅವರ ಪತ್ನಿ ಶ್ರೀಮತಿ ಲೀಲಾವತಿ ಸಂಘದ ಪರವಾಗಿ ಶ್ರೀ ಸತ್ಯನಾರಾಯಣ ಪೂಜೆಯನ್ನು ದೇವಸ್ಥಾನದ ಪುರೋಹಿತರ ನೇತೃತ್ವದಲ್ಲಿ ನೆರವೇರಿಸಿದರು. ತದ ನಂತರ ಮಂಗಳಾರತಿ, ತೀರ್ಥ ಪ್ರಸಾದವನ್ನು ವಿತರಿಸಲಾಯಿತು.

ಬೆಳಿಗ್ಗೆ ಸುಮಾರು 11 ಗಂಟೆಗೆ ಸರ್ವ ಸದಸ್ಯರ ಸಭೆ ಪ್ರಾರಂಭವಾಯಿತು. ಶ್ರೀಮತಿ ಶುಭ ಗಾಯತ್ರಿ ಅವರ ನಿರೂಪಣೆಯೊಂದಿಗೆ ಅಧ್ಯಕ್ಷರು, ಕಾರ್ಯದರ್ಶಿಗಳು ಮತ್ತು ಖಜಾಂಚಿಗಳನ್ನು ವೇದಿಕೆಗೆ ಬರಮಾಡಿ–ಕೊಳ್ಳಲಾಯಿತು. ಕುಮಾರಿ ಪ್ರಣವಿ ಅವರಿಂದ ಗಣೇಶ ಪ್ರಾರ್ಥನೆ ಸಮಾರಂಭಕ್ಕೆ ನಾಂದಿಯಾಯಿತು. ಅವರಿಗೆ ಪ್ರೋತ್ಸಾಹ ಪೂರ್ವಕವಾಗಿ ಅಧ್ಯಕ್ಷರಾದ ಶ್ರೀ ಸುಬ್ರಹ್ಮಣ್ಯಂ ನೆನಪಿನ ಕಾಣಿಕೆಯನ್ನು ನೀಡಿದರು. ನಂತರ ಸ್ವಾಗತ ಭಾಷಣ ಮತ್ತು ಪ್ರಾಸ್ತಾವಿಕ ನುಡಿಯೊಂದಿಗೆ ಸಂಘದ ಎಲ್ಲಾ ಸದಸ್ಯರು, ಸಮುದಾಯದವರು, ಹಿರಿಯರು, ಹಿತೈಷಿಗಳನ್ನು, ದಾನಿಗಳನ್ನು ಮತ್ತು ಪ್ರತಿಭೆಗಳನ್ನು ಅವರು ಸ್ವಾಗತಿಸಿದರು .

ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಶ್ಯಾಮ್‌ಸುಂದರ್ ಅವರು ಕಳೆದ ಸಾಲಿನಲ್ಲಿ ನಮ್ಮನ್ನು ಅಗಲಿದ ನಮ್ಮ ಸಮುದಾಯದವರ ಹೆಸರುಗಳನ್ನು ಓದಿದರು. ನಂತರ ಅಗಲಿದವರಿಗೆ ಸಭೆಯಲ್ಲಿ ಒಂದು ನಿಮಿಷ ಮೌನ ಆಚರಿಸಿ ಗೌರವಪೂರ್ಣ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಸಂಘದ ಕಾರ್ಯದರ್ಶಿ ಶ್ರೀ ಎಸ್.ಸಿ. ಶ್ರೀನಿವಾಸ ಅವರು ಹಿಂದಿನ ವರ್ಷದಲ್ಲಿ ಸಂಘವು ಕೈಗೊಂಡ ಕಾರ್ಯಕ್ರಮಗಳಾದ ನಾಗಾರಾಧನೆ, ಗಿರಿಜಾ ಕಲ್ಯಾಣ, ಶಂಕರ ಜಯಂತಿ ಕಾರ್ಯಕ್ರಮ ವಿವರ ತಿಳಿಸಿದರು.

ಈ ಸಂದರ್ಭದಲ್ಲಿ ವಿಶೇಷವಾಗಿ ಸಂಘವು ಸ್ಥಾಪಿಸಿರುವ ನಮ್ಮ ಸಮುದಾಯದ ಸದಸ್ಯರುಗಳಿಗೆ ಮೀಸಲಾಗಿರುವ 'ಸಾಂತ್ವನ ನಿಧಿಗೆ' ಉದಾರವಾಗಿ ದೇಣಿಗೆಯನ್ನು ನೀಡಿದ ಸದಸ್ಯರಿಗೆ, ಹಿತೈಷಿಗಳಿಗೆ ಧನ್ಯವಾದ ಅರ್ಪಿಸಿದರು.

ಸಂಘದ ಕಾರ್ಯಕಾರಿ ಸಮಿತಿಯು ಸಮಾಲೋಚಿಸಿ 2023–24 ಸಾಲಿಗೆ ಸಮಿತಿ ಸದಸ್ಯ ಶ್ರೀ ಎಸ್. ಸೋಮಸುಂದರ ಅವರನ್ನು ಸಂಘದ ನೂತನ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಲು ನಿರ್ಧರಿಸಿದೆ. ಇಲ್ಲಿಯವರೆಗೂ ಸಂಘದಲ್ಲಿ ಅಧ್ಯಕ್ಷರಾಗಿ ದಕ್ಷತೆಯಿಂದ ಕಾರ್ಯ ನಿರ್ವಹಿಸಿ ಹಲವು ನೂತನ ಸುಧಾರಣೆಗಳನ್ನು ಕಾರ್ಯರೂಪಕ್ಕೆ ತಂದ ಶ್ರೀ ಬಿ. ಸುಬ್ರಹ್ಮಣ್ಯಂರವರನ್ನು ಅಭಿನಂದಿಸಿ ಧನ್ಯವಾದ ತಿಳಿಸುವುದು ಸಮಿತಿಗೆ ಒದಗಿದ ಸೌಭಾಗ್ಯ.

ಸಂಘದ ಖಜಾಂಚಿಗಳಾದ ಶ್ರೀ ಎಸ್. ಸತ್ಯನಾರಾಯಣರವರು ಕಳೆದ ವರ್ಷದ ಆಯವ್ಯಯ ಪತ್ರವನ್ನು ಮಂಡಿಸಿದರು. ಎಲ್ಲ ಸದಸ್ಯರ ಅನುಮೋದನೆ ಕೋರಲಾಗಿ, ಸದಸ್ಯರು ಕೈ ಎತ್ತುವ ಮೂಲಕ ಅದನ್ನು ಅನುಮೋದಿಸಿದರು. ಇದರ ಸಲುವಾಗಿ ಸಭೆಗೆ ಧನ್ಯವಾದ ಅರ್ಪಿಸಲಾಯಿತು.

ಸರ್ವ ಸದಸ್ಯರ ಸಭೆಯ ದಿನದ ಅನ್ನದಾನಕ್ಕೆ ಧನಸಹಾಯ ಮಾಡಿದ ದಾನಿಗಳ ಹೆಸರುಗಳನ್ನು ಶ್ರೀ ಸೋಮಸುಂದರರವರು ಓದಿದರು. ಎಲ್ಲ ದಾನಿಗಳಿಗೆ ಧನ್ಯವಾದಗಳನ್ನು ತಿಳಿಸಲಾಯಿತು.

ಸಾಂತ್ವನ ನಿಧಿಯ ವಿಚಾರಗಳನ್ನು ಸಹ ತಿಳಿಸಿ ಸದಸ್ಯರಿಂದ ಕಾಣಿಕೆಗೆ ಅರಿಕೆ ಮಾಡಲಾಯಿತು. ದಾನಿಗಳಿಗೆ ವಂದನೆ ಸಲ್ಲಿಸಲಾಯಿತು.

## ಸಂಘದ 2022-23ನೇ ಸಾಲಿನ ಸರ್ವ ಸದಸ್ಯರ ಸಭೆಯ ವರದಿ

ಅಧ್ಯಕ್ಷ ಶ್ರೀ ಸುಬ್ರಹ್ಮಣ್ಯಂ ಅವರು ಸದಸ್ಯರ ಅಭಿಪ್ರಾಯ, ಅನಿಸಿಕೆ ಮತ್ತು ಸಲಹೆಗಳನ್ನು ಆಹ್ವಾನಿಸಿದರು. ಮಹಾಪೋಷಕರಾದ ಶ್ರೀ ವಿ.ಎಸ್. ಮಣಿ, ಸದಸ್ಯ ಶ್ರೀ ಜಿ.ಎಸ್. ಸತ್ಯಮೂರ್ತಿ ಮತ್ತು ಸದಸ್ಯ ಟಿ.ಎನ್. ರವೀಂದ್ರ ರಾಮ್‌ರವರು ಸಭೆಯಲ್ಲಿ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಸಂಘದ ಲೆಕ್ಕ ಪರಿಶೋಧಕರಾದ ಪೋಷಕ ಶ್ರೀ ಬಿ.ಎನ್.ಜಿ. ಪ್ರಸಾದ್‌ರವರು ಸದಸ್ಯರ ಪ್ರಶ್ನೆಗೆ ಸ್ಪಷ್ಟೀಕರಣ ನೀಡಿದರು. ಸಂಘದಿಂದ ಆಯವ್ಯಯಗಳನ್ನು ಮೊದಲೇ ಕಳಿಸಬೇಕು ಎಂಬ ಸೂಕ್ತವಾದ ಸಲಹೆಯನ್ನು ಸಮ್ಮತಿಸಲಾಯಿತು.

ಸಂಘದ ಕಾರ್ಯ ಚಟುವಟಿಕೆಗಳಿಗೆ ಉದಾರವಾಗಿ ಧನ ಸಹಾಯ ಮಾಡಿರುವ ದಾನಿಗಳ ಹೆಸರುಗಳನ್ನು ನೂತನ ಅಧ್ಯಕ್ಷರಾದ ಶ್ರೀ ಸೋಮಸುಂದರ ಅವರು ಓದಿ ಹೇಳಿದರು. ಮುಂದಿನ ದಿನಗಳಲ್ಲಿ ಸದಸ್ಯರು ಆರ್ಥಿಕವಾಗಿ ಸಂಘಕ್ಕೆ ಸಹಾಯ ಮಾಡಬೇಕೆಂದು ಮತ್ತು ಇದರಿಂದ ಕಾರ್ಯಕಾರಿ ಸಮಿತಿಯು ಮುಂದೆ ಇನ್ನೂ ಹೆಚ್ಚು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸಹಕಾರಿ ಆಗುತ್ತದೆ ಎಂದೂ ಸಹ ಹೇಳಿದರು.

ಶ್ರೀಮತಿ ಶುಭಾ ಗಾಯತ್ರಿರವರು ಹಿರಿಯ ದಂಪತಿಗಳನ್ನು ಪರಿಚಯಿಸಿದರು. ತದನಂತರ 75 ವಸಂತ ಪೂರ್ಣಗೊಳಿಸಿದ ಸಮುದಾಯದ ಹಿರಿಯರಿಗೆ, ದಂಪತಿಗಳ ಸಮೇತ ಸನ್ಮಾನವಾಗಿ ಶಾಲು ಹೊದಿಸಿ, ಹಾರ, ನೆನಪಿನ ಕಾಣಿಕೆಯನ್ನು ನೀಡಿ ಗೌರವಿಸಲಾಯಿತು. ಈ ಎಲ್ಲ ದಂಪತಿಗಳನ್ನು ಕಾರ್ಯಕಾರಿ ಸಮಿತಿ ಸದಸ್ಯರು ದಂಪತಿಗಳ ಸಹಿತ ಗೌರವಿಸಿದರು. ಸಂಘದ ಕಾರ್ಯಕ್ರಮಗಳಲ್ಲಿ ಇದು ಮುಖ್ಯವಾಗಿ ನಡೆದಿದ್ದು ಎಲ್ಲರ ಗಮನ ಸೆಳೆಯಿತು ಇಲ್ಲಿಯವರೆಗೆ ಸಂಘದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ ಶ್ರೀ ಸುಬ್ರಹ್ಮಣ್ಯಂರವರನ್ನು ದಂಪತಿ ಸಮೇತ ಗೌರವಿಸಲಾಯಿತು. ಸದಸ್ಯೆ ಶ್ರೀಮತಿ ಗೌರಿ ನಟರಾಜರವರು ಸಭೆಗೆ ಹಿರಿಯ ದಂಪತಿಗಳ ಮತ್ತು ಪ್ರತಿಭಾ ಪುರಸ್ಕೃತರ ವಿವರ ತಿಳಿಸಿ ಪರಿಚಯ ಮಾಡಿಕೊಟ್ಟರು. ಸುಮಾರು 35 ವಿದ್ಯಾರ್ಥಿಗಳನ್ನು ಪ್ರತಿಭಾ ಪುರಸ್ಕಾರದ ಅಂಗವಾಗಿ ಅವರಿಗೆ ರೂ.2,000/- ಕೂಪನ್ ಹಾಗೂ ಬ್ಯಾಗ್ ಸಮೇತ ಒಂದು ಅಭಿನಂದನ ಪತ್ರವನ್ನು ನೀಡಿ ಪುರಸ್ಕರಿಸಲಾಯಿತು.

ಈ ಬಾರಿ ಪ್ರತಿಭಾ ಪುರಸ್ಕೃತರಿಗೆ, ಪ್ರತಿಭಾ ಪುರಸ್ಕಾರಕ್ಕಾಗಿ ದೇಣಿಗೆ ನೀಡಿದ, ಸಂಘದ ಹಲವು ಸದಸ್ಯರಿಂದಲೇ ವಿದ್ಯಾರ್ಥಿಗಳಿಗೆ ಪುರಸ್ಕರಿಸಿದ್ದು ವಿಶೇಷವಾಗಿತ್ತು. ಸಂಘಕ್ಕೆ ನಿರಂತರವಾಗಿ ಪ್ರೋತ್ಸಾಹ ನೀಡುತ್ತಿರುವ ಕೆಲವು ಹಿರಿಯ ಸದಸ್ಯರುಗಳನ್ನು ಈ ಸಂದರ್ಭದಲ್ಲಿ ನೆನಪಿಸಿಕೊಂಡು ಅವರಿಗೆ ಗೌರವ ಸಲ್ಲಿಸಲಾಯಿತು. ಸಂಘದ ಆಯವ್ಯಯ ಪತ್ರ ಪರಿಶೀಲಿಸಿ, ತಯಾರಿಸಿ ಮತ್ತು ದೃಢೀಕರಿಸುತ್ತಿರುವ ಪೋಷಕ ಶ್ರೀ ಬಿ ಎನ್. ಗೋವಿಂದ ಪ್ರಸಾದ್ ಹಾಗೂ ಸಮಾರಂಭಗಳ ಛಾಯಾಚಿತ್ರಗಳನ್ನು ಸತತವಾಗಿ ಸುಂದರವಾಗಿ ತೆಗೆದುಕೊಡುತ್ತಿರುವ ಹಿರಿಯ ಸದಸ್ಯ ಶ್ರೀ ಕೆ ಸಿ ನಟರಾಜನ್ ಮತ್ತು ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಶಿವಕುಮಾರ್ ನಟರಾಜನ್ ಮತ್ತು ಸಂಘದ ವಾರ್ಷಿಕ ಸರ್ವ ಸದಸ್ಯರ ಸಭೆಯ ವರದಿಯನ್ನು ದಾಖಲಿಸುತ್ತಿರುವ ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಲಲಿತಾ ಮತ್ತು "ಬೃಹಚ್ಚರಣ" ತ್ರೈಮಾಸಿಕ ಪತ್ರಿಕೆಯ ಸಂಪಾದಕರಾದ ಶ್ರೀ ರಮೇಶ್‌ರವರುಗಳಿಗೆ ವಿಶೇಷವಾಗಿ ಧನ್ಯವಾದ ಸಲ್ಲಿಸಲಾಯಿತು.

ಕಾರ್ಯಕ್ರಮಕ್ಕೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ವಂದನಾರ್ಪಣೆ ಸಲ್ಲಿಸಿ ಭೋಜನದೊಂದಿಗೆ ಸಭೆ ಮುಕ್ತಾಯವಾಯಿತು ಸುಮಾರು 350ಕ್ಕೂ ಹೆಚ್ಚು ಸದಸ್ಯರು ಸಭೆಯಲ್ಲಿ ಪಾಲ್ಗೊಂಡಿದ್ದು ಒಂದು ದಾಖಲೆಯೇ ಸರಿ.



**ಹೆಚ್.ಕೆ. ಶಶಿಧರ್**
**9845173766**

**********************************************************************************

## ಹೊಸ ಸದಸ್ಯರು

ಶ್ರೀಮತಿ ಎಸ್.ಎಲ್.ವರಲಕ್ಷ್ಮಿ
ಶ್ರೀ ಪವನ್ ಗುರುಪ್ರಸಾದ್
ಶ್ರೀ ಬಿ. ರಾಘವ
ಶ್ರೀ ಶ್ರವಣ್
ಶ್ರೀ ಶ್ರೀಧರ್ ಉಮೇಶ್ ಆತ್ರೇಶ್

**ಸಂಘವು ಹೊಸ ಸದಸ್ಯರನ್ನು ಸ್ವಾಗತಿಸುತ್ತದೆ.**

**ಪ್ರತಿ ವರ್ಷದಂತೆ ಕಾರ್ಯಕಾರಿ ಸಮಿತಿಯು 2024ರ ಕ್ಯಾಲೆಂಡರನ್ನು ಹೊರತರಲು ಇಚ್ಛಿಸಿದೆ. ಇದಕ್ಕೆ ಪ್ರಾಯೋಜಿಸಲು ಬಯಸುವ ಸದಸ್ಯರು ದಿನಾಂಕ 30.9.2023ರ ಒಳಗೆ ವಿಷಯದ ವಿವರಗಳನ್ನು ಸಂಘಕ್ಕೆ ತಲುಪಿಸಲು ವಿನಂತಿ.**
**ಒಂದು ಪ್ರಾಯೋಜಕತ್ವಕ್ಕೆ ಶುಲ್ಕ ರೂ 1500/-.**

ನಮ್ಮವರು

# ಟಿ.ಎಸ್.ಕೃಷ್ಣನ್ – ಒಂದು ನೆನಪು



ಮಾನವನಾಗಿ ಭೂಮಿಯ ಮೇಲೆ ಜನಿಸಿದ ಮೇಲೆ ಒಂದಲ್ಲ ಒಂದು ದಿನ ನಾವು ಕಾಲ ಗರ್ಭದಲ್ಲಿ ಮರೆಯಾಗುವುದು ಪ್ರಕೃತಿಯ ಸಹಜ ಪ್ರಕ್ರಿಯೆ. ಮಾನವ ಜನ್ಮವೇ ಒಂದು ಪುಣ್ಯ. ಪೂರ್ವ ಜನ್ಮದ ಸುಕೃತಿಯಿಂದ ಭಗವಂತನು ನಮಗೆ ಮಾನವನಾಗಿ ಭೂಮಿಯ ಮೇಲೆ ಜನ್ಮ ತಾಳಲು ಅವಕಾಶ ಮಾಡಿಕೊಟ್ಟಿರುವಾಗ ಅದರ ಸದುಪಯೋಗ ಪಡಿಸಿಕೊಳ್ಳುವುದು, ಬಿಡುವುದು, ವೈಯಕ್ತಿಕ ಆಯ್ಕೆ. ಆದರೂ, ಭಗವಂತನು ನಮಗೆ ಕಲ್ಪಿಸಿಕೊಟ್ಟ ಅವಕಾಶಗಳನ್ನು ನಾವು ಈ ಜನ್ಮದಲ್ಲಿ ಹೇಗೆ ಸದ್ಬಳಕೆ ಮಾಡಿಕೊಳ್ಳುತ್ತೇವೆ ಎಂಬುದನ್ನು ಆಧರಿಸಿ ನಮ್ಮ ಮುಂದಿನ ಜನ್ಮದ ನಿರ್ಧಾರವಾದೀತು ಎಂಬುದು ನಮ್ಮೆಲ್ಲರ ದೃಢವಾದ ನಂಬಿಕೆ.

ನಮ್ಮ ಕುಟುಂಬ, ಸುಖ, ನೆಮ್ಮದಿ, ಸಂತೋಷಗಳು ಮೊದಲ ಆದ್ಯತೆಯಾದರೂ, ಕಿಂಚಿತ್ತಾದರೂ ದೇಶ, ಸಮಾಜ, ಸಮುದಾಯದ ಬಗ್ಗೆ ಕಾಳಜಿ ವಹಿಸುವುದು ನಮ್ಮ ಕರ್ತವ್ಯ ಎಂಬ ಭಾವನೆಯೊಂದಿಗೆ ಬದುಕು ಕಟ್ಟಿಕೊಂಡಾಗ ಮಾತ್ರವೇ ಮನಸ್ಸಿಗೆ ಹೆಚ್ಚು ಶಾಂತಿ, ನೆಮ್ಮದಿ ದೊರಕೀತು. ಉಳಿದವರ ಬದುಕು ಕೇವಲ ಪ್ರಾಣಿಗಳ ಬದುಕಿನಂತೆ ಮಾತ್ರವೇ.

ಜೀವನದಲ್ಲಿ ಕೆಲವೇ ಕೆಲವು ವ್ಯಕ್ತಿಗಳ ಬದುಕಿನ ಹೆಜ್ಜೆಯ ಗುರುತುಗಳು ಮಾತ್ರವೇ ಸದಾಕಾಲವೂ ನಮ್ಮ ನೆನಪಿನಲ್ಲಿ ಉಳಿಯಲು ಸಾಧ್ಯ. ಅದು 1980ನೇ ಇಸವಿ. ಅಂದು ನಮ್ಮ ಬೃಹಚ್ಚರಣ ಸಂಘದ ಚಟುವಟಿಕೆಗಳ ಜವಾಬ್ದಾರಿ ಹೊತ್ತ ಅನೇಕ ಪ್ರಮುಖರು ನಮ್ಮನ್ನು ಅಗಲಿ ಭಗವಂತನ ಪಾದಗಳಲ್ಲಿ ಲೀನರಾಗಿದ್ದರು. ಆ ಸಮಯದಲ್ಲಿ ಮತ್ತೆ ಸಂಘದ ಪುನಶ್ಚೇತನದ ಕಾರ್ಯದಲ್ಲಿ ತೊಡಗಿಸಿಕೊಂಡ ಕೆಲವರಲ್ಲಿ ಶ್ರೀಯುತ ಟಿ.ಎಸ್.ಕೃಷ್ಣನ್ ಸಹಾ ಪ್ರಮುಖರು. ಆ ದಿನಗಳಲ್ಲಿ ಸಂಘದ ಸೀಮಿತವಾದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗಿಯಾಗಲು ನನಗೂ ಅವಕಾಶ ಮಾಡಿಕೊಟ್ಟವರು ಶ್ರೀಯುತ ಕೃಷ್ಣನ್, ಶ್ರೀಯುತ ಎಸ್. ಶ್ರೀನಿವಾಸಯ್ಯ ಮತ್ತು ಎಸ್. ವೆಂಕಟಾಚಲಯ್ಯನವರು. ಮುಂದಿನ ಸುಮಾರು ಮೂವತ್ತು ವರ್ಷಗಳ ಕಾಲ ಸಂಘದ ಚಟುವಟಿಕೆಗಳು ಮುಂದುವರೆದು, ನಂತರದಲ್ಲಿ ಮತ್ತದೆ ಪರಿಸ್ಥಿತಿ ನಿರ್ಮಾಣವಾಯಿತು.

ಆಗ, 2010ನೇ ಇಸವಿಯಲ್ಲಿ ಶ್ರೀಯುತ ಕೃಷ್ಣನ್‌ರವರು ನಮ್ಮ ಸಮುದಾಯದ ಹಲವು ಯುವಕರನ್ನು ಗುರುತಿಸಿ, ತಮ್ಮ ಮನೆಗೆ ಆಹ್ವಾನಿಸಿ, ಸಂಘದ ಚಟುವಟಿಕೆಗಳನ್ನು ಮುಂದುವರೆಸಿಕೊಂಡು ಹೋಗುವಂತೆ ಪ್ರೋತ್ಸಾಹ ನೀಡಿದರು. ಅವರ ಸಲಹೆ, ಪ್ರೋತ್ಸಾಹದಿಂದ ಮತ್ತೆ ಬೃಹಚ್ಚರಣ ಸಂಘವು ನಮ್ಮ ಸಮುದಾಯದ ಉತ್ಸಾಹಿ ಯುವ ತಂಡದೊಂದಿಗೆ ಕಾರ್ಯರೂಪಕ್ಕೆ ಬಂದು, ಇಂದು ಸಮುದಾಯದ ಎಲ್ಲ ಸದಸ್ಯರ ಉತ್ತೇಜನ, ಪ್ರೋತ್ಸಾಹದಿಂದಾಗಿ ಅನೇಕ ಹೊಸ ಹೊಸ ವಿನೂತನ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ಹಮ್ಮಿಕೊಂಡು ಉತ್ತಮವಾಗಿ ನಿರ್ವಹಿಸಿ ಬೃಹಚ್ಚರಣ ಸಮುದಾಯದ ಮನಗೆದ್ದಿದ್ದಾರೆ ಎಂದರೆ ಅತಿಶಯೋಕ್ತಿಯಲ್ಲ.

ಶ್ರೀಯುತರು ಈಗಿನ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಕೆ. ಮಂಜುನಾರಾಯಣ್ ಮತ್ತು ಸದಸ್ಯ ಶ್ರೀ ಕೆ. ಶಿವರಾಮ್‌ರವರ ತಂದೆ.

ಈ ಸಂದರ್ಭದಲ್ಲಿ ಸಂಘದ ಉನ್ನತಿಗಾಗಿ ಶ್ರಮಿಸಿ, ಮಾರ್ಗದರ್ಶನ ನೀಡಿ ಪ್ರೋತ್ಸಾಹಿಸಿದ ಶ್ರೀಯುತ ಟಿ.ಎಸ್.ಕೃಷ್ಣನ್ ನೆನಪು ಮಾತ್ರ. ನಮ್ಮೆಲ್ಲರನ್ನು ಅಗಲಿದ ಅವರ ಆತ್ಮವು ಭಗವಂತನ ಪಾದಗಳಲ್ಲಿ ಲೀನವಾಗಲಿ ಎಂಬ ಪ್ರಾರ್ಥನೆಯೊಂದಿಗೆ.



**ವಿ.ಎಸ್.ಮಣಿ**
**9845055582**

# ನೀರಿನ ಏಳು ಪಾಠಗಳು

ಚೀನಿ ಸಂತ ಮಹಾ ವಿಜ್ಞಾನಿಯ ಮಾತುಗಳಿವು. ಸೂಕ್ಷ್ಮವಾಗಿ ಗಮನಿಸಿದರೆ, ಪ್ರಕೃತಿಯಿಂದ ನಾವು ಕಲಿಯಬೇಕಾದ್ದು ಸಾಕಷ್ಟಿದೆ. ಚೀನಿ ಸಂತ ದಾವೋ ಹೇಳಿದ ಏಳು ಪಾಠಗಳು ಬಹಳ ಅಮೂಲ್ಯ.

1. ನೀರು ಸಹಜವಾಗಿ, ಯಾವಾಗಲೂ ಮೇಲಿನಿಂದ ಕೆಳಗೆ ಹರಿಯುತ್ತದೆ. ಈ ಹರಿಯುವಿಕೆ ಎರಡು ರೀತಿಯ ಪಾಠ.

ಅ) ಯಾವಾಗಲೂ ತೀರಾ ಸರಳವಾಗಿರಿ. ತಗ್ಗಿ, ಬಗ್ಗಿ ನಡೆಯಿರಿ. **ನಮ್ಮಲ್ಲಿರಬಹುದಾದ ಐಶ್ವರ್ಯ, ಸಿರಿ, ಸ್ಥಾನ–ಮಾನಗಳ ಪ್ರದರ್ಶನ ಮಾಡದೆ ಸಹಜವಾಗಿರಿ.**

ಆ) ನದಿ ತಾನು ಹರಿಯುವ ಪ್ರದೇಶಕ್ಕೆ ನಿರುಣಿಸುತ್ತ ಫಲವತ್ತತೆ ನೀಡುತ್ತದೆ. ಇದಕ್ಕೆ ಯಾವುದೇ ಗುರುತಿಸುವಿಕೆ ಬೇಡ. ಹೀಗೆ ಯಾವುದೇ ಫಲಾಪೇಕ್ಷೆ ಇಲ್ಲದೆ ಸಮೃದ್ಧಿ ನೀಡಿ ತನ್ನ ಗಮ್ಯಸ್ಥಾನವಾದ ಸಾಗರದಲ್ಲಿ ಸದ್ದಿಲ್ಲದೆ ಒಂದಾಗುತ್ತದೆ. **ಬದುಕು ಸಮಾಜಕ್ಕಾಗಿ ಇರಲಿ. ಗುರಿ ಗಮ್ಯವಾಗಿರಲಿ.**

2. ನದಿಯ ಆಳ ಕೆಲವು ಕಡೆ ಸಾಗರದಂತೆ ಆಳವಾಗಿರಬಹುದು. ಈ ಆಳದಲ್ಲಿ ಅಮೂಲ್ಯ ಸಂಪತ್ತಿರುತ್ತದೆ. ಸಸ್ಯ, ಖನಿಜ, ಜೀವ ಸಂಕುಲ, ಇತ್ಯಾದಿ ಸಂಪತ್ತುಗಳು ತುಂಬಿರುತ್ತವೆ. ಅದು ಎಂದೂ ಅದರ ಮೇಲೆ ಸ್ವಾಮ್ಯ ಸ್ಥಾಪಿಸುವ ಪ್ರಯತ್ನ ಮಾಡುವುದಿಲ್ಲ. ತನ್ನದೆಂದು ಬೀಗುವುದಿಲ್ಲ. ಅದು ಮೇಲಿಂದಲೇ ಹರಿದು ಮುಂದೆ ಹೋಗುತ್ತದೆ. ಕಡೆಗೆ ತನ್ನ ಆಳವನ್ನು ತೋರಿಸಿಕೊಳ್ಳುವುದಿಲ್ಲ. ಮುಳುಗು ಹಾಕಿದವನಿಗೆ ಮಾತ್ರ ಇದರ ಅರಿವಾಗುತ್ತದೆ. **ಬದುಕು ಪ್ರದರ್ಶನಕ್ಕಲ್ಲ!**

3. ನೀರು ನಿಶ್ಚಲವಾಗಿದ್ದಾಗ ತನ್ನ ಪರಿಸರವನ್ನು ಪ್ರತಿಬಿಂಬಿಸುತ್ತದೆ. ನೀಲಿ ಆಕಾಶ, ತೇಲುವ ಮೋಡಗಳು, ಚಂದ್ರ, ಸೂರ್ಯ, ಹಾರುವ ಪಕ್ಷಿ ಸಂಕುಲ, ಹಸಿರು ವನರಾಶಿ, ಏನೇನು ಅದರ ಪರಿಧಿಯಲ್ಲಿ ಬರುತ್ತದೋ ಅದೆಲ್ಲವನ್ನು ಯಥಾವತ್ತಾಗಿ ಪ್ರತಿಬಿಂಬಿಸುತ್ತದೆ. ಆದರೆ ಅದು ಪ್ರತಿಬಿಂಬ ಮಾತ್ರ. **"**ಅದು ಒಮ್ಮೆ ಹರಿಯತೊಡಗಿದರೆ ಕಲಕಿದರೆ ಅದರ ಪ್ರತಿಬಿಂಬ ಕಲಕಿಹೋಗುತ್ತದೆ. ಬದುಕು ಹಾಗೆಯೇ ಇರಬೇಕು. ಬದುಕನ್ನು ಒಳಗೊಂಡಿರಬೇಕು. **ಇದು ನಾನಲ್ಲ** ಜಗತ್ತು**"** ಎಂಬ ಅರಿವಿನಿಂದ ಬದುಕಬೇಕು.

4. ನೀರು ಯಾರ ಬಗ್ಗೆಯೂ ಪೂರ್ವಾಗ್ರಹಪೀಡಿತ ಅಭಿಪ್ರಾಯ ಹೊಂದಿರುವುದಿಲ್ಲ. ನಾನು ಈ ಜಾತಿಯವನಿಗೆ ನೀರು ಕೊಡುವುದಿಲ್ಲ. ಆ ಪ್ರಾಣಿ, ಈ ಗಿಡಕ್ಕೆ ನಾನು ಯೋಗ್ಯನಲ್ಲ ಎನ್ನುವುದಿಲ್ಲ. ಯಾರು ತನ್ನ ದಾರಿಯಲ್ಲಿ ಬರುತ್ತಾರೋ ಅವರಿಗೆ ನೀರುಣಿಸಸುತ್ತದೆ. **ಯಾರಿಗೆ ಅಗತ್ಯವೋ ಅವರಿಗಾಗಿ ಇರಬೇಕು.**

5. ನೀರು ಒಂದು ರೂಪಕ್ಕೆ ಸೀಮಿತವಾಗಿಲ್ಲ. ಕಾಲಕ್ಕೆ ತಕ್ಕಂತೆ ತನ್ನನ್ನು ರೂಪಾಂತರಗೊಳಿಸುತ್ತದೆ. ಚಳಿ ಇದ್ದರೆ ಹೆಪ್ಪುಗಟ್ಟುತ್ತದೆ. ಶಾಖ ಹೆಚ್ಚಾದರೆ ಅನಿಲವಾಗುತ್ತ ಮತ್ತೆ ಮೋಡವಾಗತ್ತದೆ, ಮಳೆಯಾಗಿ ಪುನಃ ನೀರಾಗುತ್ತದೆ. ಬದುಕಿನಲ್ಲಿ ನಾನಾ ರೀತಿಯ ಸನ್ನಿವೇಶಗಳು ಎದುರಾಗುತ್ತದೆ. ಅವೆಲ್ಲವನ್ನು ಯಶಸ್ವಿಯಾಗಿ ನಿಭಾಯಿಸಬೇಕಾದರೆ, ಆಯಾಯ ಸನ್ನಿವೇಶಕ್ಕೆ ತಕ್ಕಂತೆ ಬದಲಾಗಬೇಕು. **ಬದಲಾವಣೆ ಯಶಸ್ಸಿನ ಒಂದು ಸೂತ್ರ.**

6. ನೀರಿಗೆ ಅದ್ಭುತವಾದ ಸಮಯ ಪ್ರಜ್ಞೆ ಇದೆ. ಬಿಡು ಬಿಸಿಲಿನಲ್ಲಿ ಅದು ಸುಲಭವಾಗಿ ಆವಿಯಾಗುತ್ತದೆ. ಆಗಸದಲ್ಲಿ ಮೇಲೇರಿ ಮೋಡವಾಗುತ್ತದೆ. ಬಿಡು ಬಿಸಿಲು ಭೀಕರವಾಗುತ್ತಿದ್ದಂತೆ ಮಳೆಯಾಗಿ ಸುರಿಯುತ್ತದೆ. ಎಲ್ಲಿ, ಯಾವಾಗ, ಹೇಗೆ ಬದಲಾಗಬೇಕೋ ಅದಕ್ಕೆ ತಿಳಿದಿದೆ. ಭೂಮಧ್ಯ ದೇಶದಲ್ಲಿ ಮಳೆಯಾದರೆ, ಧ್ರುವ ಪ್ರದೇಶಗಳಲ್ಲಿ ಹಿಮವಾಗುತ್ತದೆ. ಈ **ಸಮಯ ಪ್ರಜ್ಞೆನಮ್ಮ ಬದುಕಿನ ಜೀವಾಳ.**

7. ನೀರು ಸರಿಯಾಗಿ ಹರಿಯುತ್ತಾ ಇಷ್ಟೆಲ್ಲಾ ಕರ್ತವ್ಯ, ಧರ್ಮಪಾಲನೆ ಮಾಡಿದರೂ ಇದರ ಲಕ್ಷ್ಯ ಇದರ ಗಮ್ಯಸ್ಥಾನವಾದ ಸಾಗರದ ಕಡೆಯೇ. ಎಡ–ಬಲಗಡೆ ತಿರುಗಬಹುದು, ಎತ್ತರದಿಂದ ಧುಮ್ಮಿಕ್ಕಲೂಬಹುದು; ಕೊರಕಲುಗಳಲ್ಲಿ ನುಗ್ಗಬಹುದು, ಆದರೆ ಸಾಗರ ಎತ್ತಲಿದೆ ಎಂದು ಅಂತರ ಪ್ರಜ್ಞೆಗೆ ಗೊತ್ತು. ಅಂತಿಮವಾಗಿ ತಾನು ಸೇರಿ ಇಲ್ಲವಾಗಬೇಕಾದ್ದು ಈ ಸಾಗರದಲ್ಲಿ ಎಂದು ಅದಕ್ಕೆ ಗೊತ್ತು. ಆದುದರಿಂದ ನಿಸ್ಪೃಹವಾಗಿ ತನ್ನ ಕೆಲಸ ಮಾಡುತ್ತಲೆ ಮುಂದೆ ಮುಂದೆ ಸಾಗಿ ಅದು ಸಾಗರದಲ್ಲಿ **ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತದೆ.**



ನೀರ್ಗಲ್ಲಾಗಿ ಲಕ್ಷಾಂತರ ವರ್ಷ ಬದುಕಿದ್ದರೂ, ಅದರ ಗುರಿ, ಕರ್ತವ್ಯ ಮರೆಯುವುದಿಲ್ಲ. ಮುಂದೆ ಎಂದೋ ಒಂದು ದಿನ ಮತ್ತೆ ಕರಗಿ ನೀರಾಗುವ ಅವಕಾಶ ಬಂದಾಗ ಅದರ ಮೂಲ ಸ್ವಭಾವ ಎಚ್ಚರಗೊಳ್ಳುತ್ತದೆ. **ಗಮ್ಯಸ್ಥಾನದ ನೆನಪು ಉಂಟಾಗುತ್ತದೆ.**

**ಎಸ್. ಶ್ರೀನಿವಾಸಯ್ಯ**
**7899318098**

# “ನಮ್ಮ ಮೂಲ ಊರಿಗೆ ಪಯಣ”



ಎಲ್ಲರಿಗೂ ನಮಸ್ಕಾರ,

ನನ್ನ ಹೆಸರು ರವಿಶಂಕರ್.ಆರ್. (ದಿ॥ ಕೆ. ರಾಮಮೂರ್ತಿಯವರ ಸುಪುತ್ರ). ನಾನು ರಾಜರಾಜೇಶ್ವರಿ ನಗರದ ನಿವಾಸಿ. ನನ್ನದು ಒಂದು ಪುಟ್ಟ ಸುಂದರ ಕುಟಂಬ. ಪತ್ನಿ ಮಾಲತಿ ಆರ್.ಎಸ್. (ದಿ॥ ಎಸ್.ಆರ್. ಸೂರ್ಯಪ್ರಕಾಶ್ ರವರ ಸುಪುತ್ರಿ) ಮತ್ತು ಒಬ್ಬಳೇ ಮಗಳು ಪದ್ಮಶ್ರೀಯ ಜೊತೆ ಸುಖಿ ಕುಟಂಬ. ಡಿಸೆಂಬರ್ 2022ರಲ್ಲಿ ನನ್ನ ಮಗಳಾದ ಪದ್ಮಶ್ರೀಯನ್ನು ಮಂಗಳೂರಿನ ಸುಬ್ರಹ್ಮಣ್ಯ ಅಡಿಗ ಅವರ ಜೊತೆ ವಿವಾಹ ಮಾಡಿದೆವು. ಎಲ್ಲಾ ಚೆನ್ನಾಗಿಯೇ ನಡೆಯಿತು. ನನ್ನ ಹೆಂಡತಿ ಕ್ರಿಸ್ಮಸ್ ರಜೆಗೆ ಮಗಳು ಅಳಿಯನ ಜೊತೆ ಮಂಗಳೂರಿಗೆ ಹೋದಾಗ ದೇವಸ್ಥಾನದಲ್ಲಿ ಶ್ರೀಮತಿ ಮಧುಶ್ರೀ (ಸಾಧಕರು) ಅಕ್ಕನವರ ಭೇಟಿಯಾಯಿತು. ಶ್ರೀಮತಿ ಮಧುಶ್ರೀ ಅಕ್ಕನವರ ಹತ್ತಿರ ಯೋಗಕ್ಷೇಮ ವಿಚಾರಿಸುತ್ತಾ ಅವರು ನನ್ನ ಮಗಳ ಮುಖವನ್ನು ನೋಡಿ ಅವರು ನಿಮ್ಮ ಮನೆ ದೇವರು ಯಾವುದೆಂದು ಕೇಳಿದರು. ಆಗ ನನ್ನ ಮಗಳು ಶ್ರೀ ಕುಕ್ಕೆ ಸುಬ್ರಹ್ಮಣ್ಯ ಎಂದಾಗ ಅದಕ್ಕೆ ಶ್ರೀಮತಿ ಮಧುಶ್ರೀ ಅಕ್ಕ ಕಣ್ಣು ಮುಚ್ಚಿ ಧ್ಯಾನಾಸಕ್ತಳಾಗಿ ಶ್ರೀ ಕುಕ್ಕೆ ಸುಬ್ರಹ್ಮಣ್ಯ ನಿಮ್ಮ ಮನೆ ದೇವರಲ್ಲ. ನಿಮ್ಮ ಮನೆ ದೇವರು ತಮಿಳುನಾಡಿನಲ್ಲಿದೆ ಎಂದರು. ಆಶ್ಚರ್ಯಗೊಂಡ ನನ್ನ ಪತ್ನಿ ಅದೇ ಗುಂಗಿನಲ್ಲಿ ಬೆಂಗಳೂರಿಗೆ ಹಿಂದಿರುಗಿದಳು. ಸ್ವಲ್ಪ ದಿನಗಳ ನಂತರ ಶ್ರೀ ಮಧುಶ್ರೀ ಅಕ್ಕನ ಮಾತಿನ ಪ್ರಕಾರ ನಮ್ಮ ಮನೆಯ ದೇವರನ್ನು ತಿಳಿಯಲು ಸಂಕಲ್ಪಿಸಿದೆವು. ನನ್ನ ಅಳಿಯ ಸುಬ್ರಹ್ಮಣ್ಯ ಅಡಿಗನ ಸೂಚನೆಯ ಮೇರೆಗೆ ತಾಂಬೂಲ ಪ್ರಶ್ನೆಯನ್ನು ಕೇಳುವ ನಿರ್ಧಾರ ಮಾಡಿದೆವು. ಅದೇ ಪ್ರಕಾರ ಒಬ್ಬ ಖ್ಯಾತ ಜ್ಯೋತಿಷಿಗಳ ಮುಂದೆ ಈ ಪ್ರಶ್ನೆಯನ್ನು ಇಟ್ಟಾಗ ಅವರು ಕೆಲವು ಅಕ್ಷರಗಳನ್ನು ಜೋಡಿಸಿ ಕೊನೆಗೆ “ಮಂಜಪುತ್ತೂರು” ಎಂಬ ಹೆಸರನ್ನು ಹೇಳಿದರು. ಈ “ಮಂಜಪುತ್ತೂರು” ಸ್ಥಳ ಎಲ್ಲಿದೆ ಎಂದು ಹುಡುಕಿದಾಗ ತಮಿಳುನಾಡಿನಲ್ಲಿದೆ ಎಂದು ತಿಳಿಯಿತು. ಈ ಸ್ಥಳವನ್ನು ಬಹಳ ಕುತೂಹಲದಿಂದ ಭೇಟಿ ಮಾಡಲು ಇಚ್ಚಿಸಿದೆವು. ಆದರೆ ಹೇಗೆ ತಿಳಿಯುವುದು, ಯಾರನ್ನು ಸಂಪರ್ಕಿಸುವುದು ಎಂದು ತಿಳಿಯದೆ ಗೊಂದಲವಾಯಿತು. ಬಹಳ ಕಷ್ಟಪಟ್ಟು ಫೋನ್ ನಂಬರ್ ಪಡೆದು ಆ ನಂಬರಿಗೆ ಫೋನ್ ಮಾಡಿದಾಗ ಅಲ್ಲಿನ ಅರ್ಚಕರು ಮಾತನಾಡಿ ಅಲ್ಲಿನ ವಿಷಯಗಳನ್ನು ತಿಳಿಸಿದರು. ನಂತರ ನನ್ನ ಚಿಕ್ಕಪ್ಪನ ಮಗ ಸಾಗರನ (ಕೆ. ಶಿವಕುಮಾರರವರ ಸುಪುತ್ರ) ಜೊತೆ “ಮಂಜಪುತ್ತೂರು” ಸ್ಥಳಕ್ಕೆ ಭೇಟಿ ಕೊಟ್ಟೆವು. ಅಲ್ಲಿ ಸ್ವಾಮಿಯನ್ನು ನೋಡಿದಾಗ ಮತ್ತು ಅಲ್ಲಿಯ ವಾತಾವರಣವನ್ನು ಕಂಡಾಗ ಬಹಳ ಅಚ್ಚರಿಯಾಯಿತು. ಏಕೆಂದರೆ ತಾಂಬೂಲ ಪ್ರಶ್ನೆಯ ಉತ್ತರದಲ್ಲಿ ಬಂದಂತಹ ರೀತಿಯಲ್ಲಿ ಅಲ್ಲಿ ಸ್ವಾಮಿ ನೆಲೆಸಿರುವುದನ್ನು ಕಂಡು ಬಹಳ ಆಶ್ಚರ್ಯವಾಯಿತು ಮತ್ತು ಬೇಸರವೂ ಆಯಿತು. ಅಲ್ಲಿ ಶ್ರೀ ಷಣ್ಮುಖ ಸಮೇತ ಶ್ರೀ ಕಾಲಭೈರವೇಶ್ವರ ಸ್ವಾಮಿ ಒಂದು ಚಪ್ಪರದ ಕೆಳಗೆ ನೆಲೆಸಿದ್ದಾರೆ.

ಸ್ವಲ್ಪ ದೂರದಲ್ಲಿಯೇ ಸಪ್ತ ಮಾತೃಕೆಯರು, ಶಿವ, ದುರ್ಗಾ, ಗಣಪತಿ, ನವಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ. ಹಾಗೆಯೇ ಮತ್ತೊಂದು ಜಾಗದಲ್ಲಿ ಶ್ರೀ ವೆಂಕಟೇಶ್ವರ ಸ್ವಾಮಿಯ ದೇವಾಲಯ ಮೊಗಲರಿಂದ ಬಹುತೇಕ ನಾಶವಾಗಿದೆ. ಇದನ್ನು ನೋಡಿದ ನಮಗೆ ಬಹಳ ಬೇಸರವಾಯಿತು. ಅಲ್ಲಿ ಪ್ರತಿ ದಿನ ಒಂದು ಹೊತ್ತು ಪೂಜೆಯೂ ಸರಿಯಾಗಿ ನಡೆಯುತ್ತಿಲ್ಲ. ನಂತರ ಅಲ್ಲಿನ ಅರ್ಚಕರು ಸ್ವತಃ ನಮ್ಮ ಕೈಯಿಂದಲೇ ಸ್ವಾಮಿಗೆ ವಿಶೇಷ ಪೂಜಾದಿ ಅಭಿಷೇಕಗಳನ್ನು ಮಾಡಿಸಿದಾಗ ಅತ್ಯಂತ ಸಂತೋಷವಾಯಿತು. ಅಲ್ಲಿಂದ ಹಿಂದಿರುಗಿದ ನಮಗೆ ಏನೋ ಸಂತೋಷ, ಮನಸ್ಸಿಗೆ ನೆಮ್ಮದಿಯಾಯಿತು. ಹೀಗೆ ನಮ್ಮ ಮನೆ ದೇವರನ್ನು ಗೊತ್ತು ಮಾಡಿಕೊಂಡು ಸ್ವಾಮಿಯ ಅನುಗ್ರಹಕ್ಕೆ ಪಾತ್ರರಾದೆವು. “ಸರ್ವೇ ಜನಾಃ ಸುಖಿನೋ ಭವಂತು”

**ಪ್ರಾರ್ಥನೆ:** ಶ್ರೀ ಸ್ವಾಮಿಯ ಭಕ್ತಾದಿಗಳು ದೊಡ್ಡ ಮನಸ್ಸು ಮಾಡಿ ಈ ದೇವಸ್ಥಾನದ ಜೀರ್ಣೋದ್ಧಾರ ಮಾಡಬೇಕಾಗಿ ವಿನಂತಿಸುತ್ತೇನೆ.

ಸ್ಥಳಕ್ಕೆ ನಕ್ಷೆಯ ಲಿಂಕ್ : https://maps.app.goo.gl/y921d91gqhmxUHwY6



**ಆರ್. ರವಿಶಂಕರ್**
**9900191921**

ಕಲಾವಿದೆ

# “ಲಯ ಚೇತನ” ಪುರಸ್ಕೃತೆ ಶ್ರೀಮತಿ ರಂಜಿನಿ ಸಿದ್ಧಾಂತಿ ವೆಂಕಟೇಶ್



ಶ್ರೀಮತಿ ವಿದೂಷಿ ರಂಜನಿ ಸಂಗೀತ ಕುಟುಂಬದಿಂದ ಬಂದವರು. ಶ್ರೀಮತಿ ರಂಜಿನಿಯವರು ಮೃದಂಗ ವಾದಕಿ ಮತ್ತು ಗಾಯಕಿಯೂ ಹೌದು. ಇವರ ತಾತ ವಿದ್ವಾನ್ ಬಳ್ಳಾರಿ ವೆಂಕಟಪ್ಪ ಹಾಗೂ ಅಜ್ಜಿ ವಿದೂಷಿ ಬಿ.ವಿ. ಸುಭದ್ರಮ್ಮ, ತಾಯಿ ವಿದೂಷಿ ಬಿ.ವಿ.ಸರೋಜಾ, ಸಹೋದರಿ ವಿದೂಷಿ ಧನ್ಯ (ಗಾಯನ ಮತ್ತು ಪಿಟೀಲು ಕಲಾವಿದರು). ಶ್ರೀಮತಿ ರಂಜನಿಯವರು ಮೃದಂಗ ವಿದ್ವಾನ್ ಎನ್.ಜಿ.ರವಿಯವರ ಸೋದರ ಸಂಬಂಧಿ. ಮೃದಂಗ ಗುರುಗಳು – ವಿದ್ವಾನ್ ದಿವಂಗತ ಶ್ರೀ ಬಳ್ಳಾರಿ ಜಿ. ಮರಿಯಣ್ಣ, ವಿದ್ವಾನ್ ಶ್ರೀ ಎನ್.ಜಿ. ರವಿ ಮತ್ತು ವಿದ್ವಾನ್ ಶ್ರೀ ಹೆಚ್. ಎಸ್. ಸುಧೀಂದ್ರ. ಗಾಯನವನ್ನು ವಿದೂಷಿ ನೀಲಾ ರಾಮಗೋಪಾಲ್ ಅವರಿಂದ ಕಲಿತಿದ್ದಾರೆ. ಕೆ.ಎಸ್.ಇ.ಇ.ಬಿ ನಡೆಸಿದ ಮೃದಂಗ ವಿದ್ವತ್ ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕ್ ಹಾಗೂ ಗಾಯನ ವಿದ್ವತ್ತಿನಲ್ಲಿ ದ್ವಿತೀಯ ಶ್ರೇಣಿ ಪಡೆದಿರುತ್ತಾರೆ.

ಇವರು ಬೆಂಗಳೂರಿನ ಆಕಾಶವಾಣಿ ಮತ್ತು ದೂರದರ್ಶನದಲ್ಲಿ, ‘ಎ’ ದರ್ಜೆಯ ಮೃದಂಗ ಕಲಾವಿದೆ. ಬೆಂಗಳೂರಿನ ಜೈನ್ ವಿಶ್ವವಿದ್ಯಾಲಯದಿಂದ ಸಂಗೀತದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುತ್ತಾರೆ. ಹಲವಾರು ವಿಶ್ವವಿದ್ಯಾಲಯಗಳಲ್ಲಿ ಸಂದರ್ಶಕ ಅಧ್ಯಾಪಕರಾಗಿ ಕೆಲಸ ಮಾಡುತ್ತಿದ್ದಾರೆ. ಶ್ರೀಮತಿ ರಂಜಿನಿಯವರು ವಿದ್ವಾನ್ ಮತ್ತು ವಿದೂಷಿಯರಾದ ಡಾ॥ ಬಾಲಮುರಳಿ ಕೃಷ್ಣ, ಕನ್ಯಾಕುಮಾರಿ, ಎಂ.ಎಸ್. ಶೀಲಾ, ಟಿ ಎಸ್. ಸತ್ಯವತಿ, ನಾಗಮಣಿ ಶ್ರೀನಾಥ್, ಸುಕನ್ಯಾ ಪ್ರಭಾಕರ್, ಬೆಂಗಳೂರು ಸಹೋದರರು ಮತ್ತು ಇನ್ನೂ ಅನೇಕರಿಗೆ ಪಕ್ಕವಾದ್ಯದಲ್ಲಿ ಸಹಕರಿಸಿದ್ದಾರೆ.

ಶ್ರೀಮತಿ ರಂಜಿನಿಯವರು “ಸುಭದ್ರಮ್ಮ ವೆಂಕಟಪ್ಪ ಸಂಗೀತ ವಿದ್ಯಾಲಯ ಟ್ರಸ್ಟ್”ನ ಸಂಸ್ಥಾಪಕರು ಮತ್ತು ಅನೇಕ ವಿದ್ಯಾರ್ಥಿಗಳಿಗೆ ಬೋಧನೆ ಮಾಡುತ್ತಿದ್ದಾರೆ. "ನಾದೋಪಾಸನ ಸಂಕೀರ್ತನೆಗಳು", “ತತ್ವಾಮೃತಂ", "ಲಯಾಮೃತಂ", "ಶಿವ ಶಕ್ತಿ ಸ್ವಯಂಭೋ", "ಪಲ್ಲೇಶನ್", "ಸುಳಾದಿ", “ಪುರಂದರ ನವರತ್ನ ಮಾಲಾ”, “ಮುಂಡಿಗೆ", "ಪುರಂದರ ಪದ ಸಂಪದ", "ಪೂಜೆ ಮಾಡೋಣ ಬನ್ನಿರೆ" ಮತ್ತು ಇನ್ನೂ ಮುಂತಾದ ಆಡಿಯೋ ಕ್ಯಾಸೆಟ್‌ಗಳು ಮತ್ತು ವಿಡಿಯೋ ಸಿಡಿಗಳು ಬಿಡುಗಡೆಯಾಗಿದೆ.

**ಪ್ರಶಸ್ತಿಗಳು**

“ನಾದ ಜ್ಯೋತಿ ಪುರಸ್ಕಾರ”, "ಬೆಸ್ಟ್ ಕಾನ್ಸರ್ಟ್ ", “ಅನನ್ಯ ಯುವ ಪುರಸ್ಕಾರ”, “ಮೃದಂಗ ವಾದನ ಮನೋಹರ”, 'ಅನನ್ಯ ಕಲಾ ಪ್ರತಿಭಾ", "ಶ್ರೇಷ್ಠ ಮೃದಂಗ ವಾದಕಿ", "ಅತ್ಯುತ್ತಮ ಪಕ್ಕವಾದ್ಯ ಮೃದಂಗ ಕಲಾವಿದೆ" ಹಾಗೂ ಇನ್ನೂ ಹಲವಾರು ಪ್ರಶಸ್ತಿಗಳು ಇವರಿಗೆ ಸಂದಿವೆ.

**ಭಾರತದಲ್ಲಿ ಪ್ರದರ್ಶನಗಳು:**

- ಆಕಾಶವಾಣಿ, ಬೆಂಗಳೂರು ದೂರದರ್ಶನ (ಚಂದನ), ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ನೀಡಿದ ಪ್ರದರ್ಶನಗಳು ಮತ್ತು ಖಾಸಗಿ ವಾಹಿನಿಗಳಲ್ಲಿ ಕಾರ್ಯಕ್ರಮ
- 2006 ರಲ್ಲಿ ಭೋಪಾಲಿನಲ್ಲಿ ನಡೆದ ಮಹಿಳೆಯರು ಮತ್ತು ಸಾಂಸ್ಕೃತಿಕ ಪರಂಪರೆಯ ಕುರಿತು "ಪ್ರಥಮ" ವಿಶೇಷ ಕಾರ್ಯಕ್ರಮ
- ಗಾಯನ ಸಮಾಜ, ಕರ್ನಾಟಕ ಗಾನಕಲಾ ಪರಿಷತ್ತು, ತಾಳಮದ್ದಳೆ ಕಲಾ ಕೇಂದ್ರ, ಶೇಷಾದ್ರಿಪುರಂ ಸಂಗೀತ ಸಭಾ, ನಾದ ರಂಜನಿ ಸಭಾ, ದೇವಗಿರಿ ಸಂಗೀತ ಸಭಾ, ವಸಂತೋತ್ಸವ, ರಾಮ ಲಲಿತ ಕಲಾ ಮಂದಿರ, ಯವನಿಕಾ ಕೇಂದ್ರ, ಶ್ರೀ ಗುರುವಾಯೂರಪ್ಪನ್ ಭಜನಾ ಸಮಾಜ ಟ್ರಸ್ಟ್, ಒಡಕತ್ತೂರು ಮಠ, ಗಿರಿನಗರ ಸಂಗೀತ ಸಭಾ, ಶ್ರೀ ರಾಮ ಸೇವಾ ಮಂಡಳಿ ಟ್ರಸ್ಟ್, ಪುರಂದರ ಭವನ, ಬನಶಂಕರಿ ಫೈನ್ ಆರ್ಟ್ ಸೊಸೈಟಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದವರು ನಡೆಸುವ ಉದ್ಯಾನವನದಲ್ಲಿ ಉದಯ ರಾಗ, ಮತ್ತು ಇನ್ನೂ ಅನೇಕ.
- ರಾಮನವಮಿ, ಗಣೇಶ ಚತುರ್ಥಿ, ದಸರಾ, ಹನುಮ ಜಯಂತಿ, ಡಿಸೆಂಬರ್ ಋತುವಿನ ಚೆನ್ನೈ ಮುಂತಾದ ಹಬ್ಬಗಳಲ್ಲಿ ನಿಯಮಿತವಾಗಿ ಪ್ರದರ್ಶನ.
- ದೆಹಲಿಯಲ್ಲಿ ನಡೆದ ಸಂಗೀತ ಸಮ್ಮೇಳನ ಆಲ್ ಇಂಡಿಯಾ ರೇಡಿಯೊದಲ್ಲಿ ಸ್ತ್ರೀ ತಾಳ ತರಂಗ್ ಗುಂಪಿನೊಂದಿಗೆ ಪ್ರದರ್ಶನ.
- ಬೆಂಗಳೂರಿನ ಗೋಖಲೆ ಸಂಸ್ಥೆ, ಚಿಂತಾಮಣಿ ಗಾಯನ ಸಮಾಜ, ನಾದೋಪಾಸನ ಸಂಗೀತ ಸಭೆ, ರಾಗ ಸುಧಾಲಯ, ಶೃಂಗಾರ ಸಂಗೀತ ಸಭೆ, ಬಳ್ಳಾರಿಯಲ್ಲಿ ಕನ್ನಡ ಮತ್ತು ಸಾಂಸ್ಕೃತಿಕ ಗೋಷ್ಠಿಗಳು ಮತ್ತು ಇನ್ನೂ ಅನೇಕ ಸ್ಥಳಗಳಲ್ಲಿ ಗಾಯನ ಪ್ರದರ್ಶನಗಳು.

ಶ್ರೀಮತಿ ರಂಜಿನಿಯವರು ಭಾರತ ದೇಶವಲ್ಲದೆ ರಷ್ಯಾ, ಹಾಂಕಾಂಗ್, ಅಬುದಾಬಿ, ಡೆನ್ಮಾರ್ಕ್, ಸ್ವಿಟ್ಜರ್ಲೆಂಡ್, ಚೀನಾ, ಸಿಂಗಾಪುರ್, ಸೈಪ್ರಸ್ (ದ್ವೀಪ) ಮತ್ತು ಬ್ಯಾಂಕಾಕ್ ದೇಶಗಳಲ್ಲೂ ತಮ್ಮ ವಿದ್ವತ್ ಪ್ರದರ್ಶನ ನೀಡಿದ್ದಾರೆ.

ಬೃಹಚ್ಚರಣ ಸಮುದಾಯದ ಶ್ರೀ ಎಸ್.ವೆಂಕಟೇಶ್(ಮೊ.9886567430)ರವರ ಪತ್ನಿಯಾದ ಶ್ರೀಮತಿ ರಂಜಿನಿ ಸಿದ್ಧಾಂತಿ ವೆಂಕಟೇಶ್‌ರವರು ಅತ್ಯದ್ಭುತ ಗಾಯಕಿ ಮತ್ತು ಮೃದಂಗ ವಾದಕಿಯಾಗಿರುವುದು ಬೃಹಚ್ಚರಣ ಸಂಘಕ್ಕೆ ಹೆಮ್ಮೆ ಎನಿಸುತ್ತದೆ. ಶ್ರೀಮತಿ ರಂಜಿನಿಯವರನ್ನು ಪರಿಚಯ ಮಾಡಿಕೊಳ್ಳಲು ಇದೊಂದು ಸದವಕಾಶವಾಗಿದೆ.

## ಜನನ



ಸಂಘದ ಸದಸ್ಯ ಶ್ರೀ ಅವಿನಾಶ್ ಮಂಜುನಾಥ್ ಮತ್ತು ಶ್ರೀಮತಿ ರಾಗಿಣಿ ಅವಿನಾಶ್ ದಂಪತಿಗಳಿಗೆ ದಿನಾಂಕ 26.6.2023ರಂದು ಗಂಡು ಮಗುವಿನ ಜನನವಾಯಿತು.

****

ಸಂಘದ ಹಿರಿಯ ಸದಸ್ಯ ಶ್ರೀ ವಿ. ಛಾಯಾಪತಿಯವರ ಪುತ್ರ ಶ್ರೀ ಆದಿತ್ಯ ವಿಷ್ಣು ಮತ್ತು ಹಿರಿಯ ಸದಸ್ಯ ಶ್ರೀ ಹೆಚ್.ಪಿ. ಶ್ರೀನಿವಾಸ್‌ರವರ ಮೊಮ್ಮಗಳು ಶ್ರೀಮತಿ ಐಶ್ವರ್ಯರವರಿಗೆ ದಿನಾಂಕ 24.7.2023ರಂದು ಗಂಡು ಮಗುವಿನ ಜನನವಾಯಿತು. **ಶ್ರೀ ವಿ. ಛಾಯಾಪತಿಯವರು ಸಂಘದ ಕಾರ್ಯ ಚಟುವಟಿಕೆಗಳಿಗೆ ರೂ. 5000/–ಗಳನ್ನು ನೀಡಿರುತ್ತಾರೆ.**

**ಸಂಘವು ನವಜಾತ ಶಿಶುಗಳಿಗೆ ಆಯುರಾರೋಗ್ಯ ಹಾಗೂ ವಿದ್ಯೆಯನ್ನು ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತದೆ.**

*****************************************************************************************

## ಉಪನಯನ



ಸಂಘದ ಸದಸ್ಯ ಶ್ರೀ ಪದ್ಮನಾಭರವರ ಸಹೋದರನ (ದಿವಂಗತರಾದ ಜಂಬುನಾಥ್ ಮತ್ತು ಭಾರತಿರವರ) ಪುತ್ರ ಚಿ. ನಂದನ್ ಉಪನಯನವು ದಿನಾಂಕ 27.4.2023ರಂದು ಸರ್ಜಾಪುರದಲ್ಲಿ ನೆರವೇರಿತು.

**ವಟುವಿಗೆ ಶುಭವಾಗಲೆಂದು ಸಂಘವು ಭಗವಂತನಲ್ಲಿ ಪ್ರಾರ್ಥಿಸುತ್ತದೆ.**

*****************************************************************************************

## ಗೃಹಪ್ರವೇಶ



ಸಂಘದ ಹಿಂದಿನ ಕಾರ್ಯಕಾರಿ ಸಮಿತಿ ಸದಸ್ಯರಾಗಿದ್ದ ದಿವಂಗತ ಎ.ವಿ. ಮಂಜುನಾಥ್ ಮತ್ತು ಶ್ರೀಮತಿ ಶುಭಾರವರ ಮಕ್ಕಳಾದ ಸದಸ್ಯ ಶ್ರೀ ಅರುಣ್ ಪ್ರಸಾದ್ ಮತ್ತು ಶ್ರೀಮತಿ ರಮ್ಯಾ ಅರುಣ್ ದಂಪತಿಗಳ ಹಾಗೂ ಸದಸ್ಯ ಶ್ರೀ ಅವಿನಾಶ್ ಮಂಜುನಾಥ್ ಮತ್ತು ಶ್ರೀಮತಿ ರಾಗಿಣಿ ಅವಿನಾಶ್ ದಂಪತಿಗಳ ನೂತನ ಗೃಹಪ್ರವೇಶವು ದಿನಾಂಕ 3.4.2023ರಂದು ಬೆಂಗಳೂರಿನಲ್ಲಿ ನೆರವೇರಿತು.

*****

ಸಂಘದ ಹಿರಿಯ ಸದಸ್ಯ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಜಿ. ವೆಂಕಟೇಶ್‌ರವರ ಪುತ್ರ ಸದಸ್ಯ ಶ್ರೀ ಜಿ.ವಿ. ಶ್ಯಾಮ್ ಮತ್ತು ಶ್ರೀಮತಿ ರೂಪ ಶ್ಯಾಮ್‌ರವರ ನೂತನ ಗೃಹಪ್ರವೇಶವು ದಿನಾಂಕ 23.4.2023ರಂದು ಬೆಂಗಳೂರಿನಲ್ಲಿ ನೆರವೇರಿತು.

*****

ಸಂಘದ ಪೋಷಕರಾದ ಶ್ರೀ ಆರ್.ಎಸ್. ರಮೇಶ್ ಮತ್ತು ಸದಸ್ಯೆ ಶ್ರೀಮತಿ ರೇಖಾ ರಮೇಶ್ ದಂಪತಿಗಳ ನೂತನ ಗೃಹಪ್ರವೇಶವು ದಿನಾಂಕ 14.5.2023ರಂದು ಬೆಂಗಳೂರಿನಲ್ಲಿ ನೆರವೇರಿತು. **ಇದೇ ಸಂದರ್ಭದಲ್ಲಿ ಶ್ರೀ ರಮೇಶ್‌ರವರು ರೂ 10000/–ಗಳನ್ನು ಸಂಘದ ವಿವಿಧ ಚಟುವಟಿಕೆಗಳಿಗಾಗಿ ನೀಡಿದ್ದಾರೆ.**

*****

ಸಂಘದ ಸದಸ್ಯರಾದ ಶ್ರೀಮತಿ ಕೆ.ಆರ್.ರಮಾದೇವಿ ಮತ್ತು ಪೋಷಕಿ ಡಾ॥ ಸುಮಾ ಪಿ. ಸರಾಫ್‌ರವರ ನೂತನ "ಅಕ್ಷಯ"ದ ಗೃಹಪ್ರವೇಶವು ದಿನಾಂಕ 24.5.2023ರಂದು ಬೆಂಗಳೂರಿನಲ್ಲಿ ನೆರವೇರಿತು.

**ಸಂಘವು ಈ ಸದಸ್ಯರಿಗೆ ಶುಭ ಹಾರೈಸುತ್ತದೆ.**

# ಸರ್ವ ಸದಸ್ಯರ ಸಭೆ – 23.07.2023

ಚಿತ್ರ ಕೃಪೆ : ಕೆ.ಸಿ. ನಟರಾಜನ್




ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಬಿ. ಸುಬ್ರಹ್ಮಣ್ಯಂ ಮತ್ತು ಶ್ರೀಮತಿ ನಳಿನಿರವರಿಗೆ ಧನ್ಯವಾದಗಳೊಂದಿಗೆ ಗೌರವ ಸಮರ್ಪಣೆ












# ಸರ್ವ ಸದಸ್ಯರ ಸಭೆ - 23.07.2023

ಚಿತ್ರ ಕೃಪೆ : ಕೆ.ಸಿ. ನಟರಾಜನ್















# ಸರ್ವ ಸದಸ್ಯರ ಸಭೆ – 23.07.2023

ಚಿತ್ರ ಕೃಪೆ : ಕೆ.ಸಿ. ನಟರಾಜನ್













ಕೆ.ಎಸ್. ವಲ್ಲರಿ, ಅಜಯ್ ಆತ್ರೇಯ, ಅಭಯ್ ಗಣೇಶ್, ಭುವನಾ ಶಾಲ್ಯ – 10ನೇ ತರಗತಿ

# ಸರ್ವ ಸದಸ್ಯರ ಸಭೆ – 23.07.2023

ಚಿತ್ರ ಕೃಪೆ : ಕೆ.ಸಿ. ನಟರಾಜನ್




ಬಿ. ಚೇತನ್, ಪ್ರಿಯಾ ದೇಶಪಾಂಡೆ, ಕೆ. ಕನಿಷ್ಕ್, ಎಸ್. ಶ್ರೀ ಸ್ಕಂದ – 10ನೇ ತರಗತಿ




ಆತ್ರೇಯ ನಂದನ, ವೈಷ್ಣವಿ, ಎಸ್.ಆರ್. ಮಾನಸಾ, ಆರ್.ಎಸ್. ಇಂದೂಜ – 10ನೇ ತರಗತಿ




ಸಮ್ಮಿತ್ ಶಶಿಧರ್, ಚಿರಂತನ್ ಶಾಲ್ಯ, ಆರ್.ಡಿ. ಅಭಿರಾಮ್, ಜಿ. ಪ್ರಣವಿ – 10ನೇ ತರಗತಿ




ಆರ್. ಕಾರ್ತಿಕ್ ರಾಮ್, ಜಿ. ಆದಿತ್ಯ, ಲಕ್ಷ್ಮೀ ಜಿ. ರವಿಶಂಕರ್ – 10ನೇ ತರಗತಿ




ಆಯುಷ್ ರಾಘವೇಂದ್ರ, ಶ್ರೇಯಾ ಶಂಕರ್, ನಿಧಿ ಪ್ರದೀಪ್, ಸಿ.ಎಸ್. ಶರಣ್ಯಾ – ಪಿ.ಯು.ಸಿ

# ಸರ್ವ ಸದಸ್ಯರ ಸಭೆ – 23.07.2023

ಚಿತ್ರ ಕೃಪೆ : ಕೆ.ಸಿ. ನಟರಾಜನ್




ಬಿ.ಎಸ್. ಸುರಬಿ, ಅಪೇಕ್ಷಿತ್ ಕೃಷ್ಣ – ಪದವಿ




ಆರ್.ಎಸ್. ಅಜಯ್‌ಕೃಷ್ಣ, ರಜತ್ ಕೃಷ್ಣ, ಸಿ.ಎಸ್. ಶ್ರೀನಿಧಿ – ಇಂಜಿನಿಯರಿಂಗ್ ಪದವಿ, ಎಸ್. ಧ್ಯಾನ್ – 10ನೇ ತರಗತಿ



ಎಂ.ಎಂ. ಸಿರಿ – ಪಿ.ಯು.ಸಿ



ಡಾ॥ ಶ್ರೀಪ್ರೀತಾ ರಮೇಶ್ – ವೈದ್ಯಕೀಯ ಪದವಿ

# ಸರ್ವ ಸದಸ್ಯರ ಸಭೆ – 23.07.2023

ಚಿತ್ರ ಕೃಪೆ : ಕೆ.ಸಿ. ನಟರಾಜನ್



ಎಸ್. ಸುಹಾಸಿನಿ, ಸಂಗೀತ (ಹಾಡುಗಾರಿಕೆ ಜೂನಿಯರ್)













**ಸದಸ್ಯರಲ್ಲಿ ಒಂದು ಮನವಿ**

ಸಂಘವು ಎಲ್ಲಾ ಸದಸ್ಯರಿಗೂ ಗುರುತಿನ ಚೀಟಿಯನ್ನು ನೀಡುವ ಉದ್ದೇಶಿಸಿರುವುದರಿಂದ ದಯಮಾಡಿ ಸದಸ್ಯರು ತಮ್ಮ ಛಾಯಾಚಿತ್ರ (Passport size colour photo)ವನ್ನು ಸಂಘದ ವಿಳಾಸಕ್ಕೆ ಅಥವಾ ಕಾರ್ಯಕಾರಿ ಸಮಿತಿ ಸದಸ್ಯರಿಗೆ ತಲುಪಿಸಬೇಕಾಗಿ ವಿನಂತಿ.

# ಸಾಂತ್ವನ ನಿಧಿಗೆ ದೇಣಿಗೆ ನೀಡಿದ ಸದಸ್ಯರು ಮತ್ತು ಸಮುದಾಯದವರು (ರೂ. ಗಳಲ್ಲಿ)

| | | | | | |
|---|---|---|---|---|---|
|  | ಶ್ರೀಧರ್ ಎ.ಸಿ. | 2001/– |  | ಗುಂಡಪ್ಪ ಕೆ. | 10000/– |
|  | ರಘು ಟಿ.ಎನ್. | 2000/– |  | ಸವಿತಾ ಪ್ರಸಾದ್ | 1000/– |
|  | ಸೌಮ್ಯಾ ಕಶ್ಯಪ್ | 5000/– |  | ಶರ್ಮ ಟಿ.ವಿ.ಎಸ್. | 20000/– |
|  | ದಕ್ಷಿಣಾ ಮೂರ್ತಿ ಆರ್.ಎ. | 5001/– |  | ಸುಂದರನ್ ಪಿ. | 1000/– |
|  | ವೈಜಯಂತಿ | 5000/– |  | ಸುನಂದ ಗೋವಿಂದರಾಜು | 5000/– |
|  | ಸತ್ಯಪ್ರಸಾದ್ ಎಸ್.ಆರ್. | 2001/– |  | ಶ್ರೀನಿವಾಸನ್ ಎ.ವಿ. | 500/– |
|  | ಭಾನುಮತಿ ಟಿ.ಎನ್. | 2000/– |  | ನಾಗರತ್ನಮ್ಮ ಡಿ.ಸಿ. | 1000/– |
|  | ಪ್ರಶಾಂತ್ ಆರ್.ಎಸ್. | 1001/– |  | ಅಶ್ವಥ್ ಎನ್. | 5000/– |
|  | ಛಾಯಾಪತಿ ವಿ. | 5000/– |  | ದಿ॥ ಸರಸ್ವತಮ್ಮನವರ ಸ್ಮರಣಾರ್ಥ | 10012/– |
|  | ಶ್ರೀನಿವಾಸ ಎಸ್.ಸಿ.<br>ರಾಘವ ಪ್ರಸಾದ್ ಎಸ್.ಸಿ. | 50000/– |  | ಸೂರ್ಯಕುಮಾರಿ ಹೆಚ್.ಪಿ. | 5000/– |
|  | ಮುತ್ತುಸ್ವಾಮಿ ಜಿ. | 5000/– |  | ಶೇಷಾದ್ರಿ ಎಸ್.ವಿ. | 3000/– |
|  | ಮಿಥಿಲೇಶ್ ಎಂ. | 5000/– |  | ಅರುಣ್ ಕುಮಾರ್ ಆರ್.ಪಿ. | 10000/– |
|  | ಸೋಮಸುಂದರ ಎಸ್. | 25000/– |  | ಸೂರ್ಯನಾರಾಯಣ ಬಿ.ಎಸ್. | 10000/– |
|  | ಅರುಣ್ ವಿ. | 5000/– |  | ದೀಪ್ತಿ ಅಜಯ್ | 5000/– |
|  | ಗುರು ಪ್ರಸನ್ನ ಜಿ. | 5000/– | | | |

**ದೇಣಿಗೆ ನೀಡಿದ ಎಲ್ಲರಿಗೂ ಧನ್ಯವಾದಗಳು**

# ಶಂಕರ ಜಯಂತಿ – 25–04–2023

ಶ್ರೀ ಶಂಕರ ಜಯಂತಿಯ ಪ್ರಯುಕ್ತ ದಿನಾಂಕ ಏಪ್ರಿಲ್ 25 2023, ಮಂಗಳವಾರ, ಸಂಘವು ಆಯೋಜಿಸಿದ್ದ ಭಕ್ತಿಸಂಗೀತ ಕಾರ್ಯಕ್ರಮವು ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಾಲಯದ ಆವರಣದಲ್ಲಿ ಸಂಜೆ ಯಶಸ್ವಿಯಾಗಿ ಜರುಗಿತು. ನಮ್ಮ ಕಲಾವಿದರು ಪ್ರಸ್ತುತ ಪಡಿಸಿದ ಶಾಸ್ತ್ರೀಯ ಸಂಗೀತ ಆಧಾರಿತ (ವಿಶೇಷವಾಗಿ ಶಂಕರ ಭಗವತ್ಪಾದರ ಕೃತಿಗಳು) ಶೋತೃಗಳ ಹಾಗೂ ದೇವಸ್ಥಾನದ ಆಡಳಿತ ಮಂಡಳಿಯ ಮೆಚ್ಚುಗೆಗೆ ಪಾತ್ರವಾಯಿತು. ಸಂಘದ ಸದಸ್ಯ ವಿದ್ವಾನ್ ಶ್ರೀ ಶ್ರೀನಿವಾಸ, ಕಲಾವಿದೆ ಕು॥ ವಾಣಿಶ್ರೀ, ವಿದೂಷಿ ವಾಸುಕಿ ಪರಿಮಳ (ವಯೊಲಿನ್), ವಿದ್ವಾನ್ ಕಾರ್ತೀಕ್ ರವಿಕುಮಾರ್ (ಮೃದಂಗ) ಮತ್ತು ವಿದ್ವಾನ್ ರವಿಶಂಕರ್ (ಘಟಂ) ಇವರುಗಳು ಸಂಗೀತ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು. ಕಾರ್ಯಕ್ರಮದ ನಂತರ ಸಂಘದ ಸದಸ್ಯರಾದ ವೀಣಾ ವಿದ್ವಾನ್ ಶ್ರೀ ದಕ್ಷಿಣಾಮೂರ್ತಿ ಮತ್ತು ಸಂಘದ ಹಿರಿಯ ದಾನಿ ಸದಸ್ಯರು ಕಲಾವಿದರನ್ನು ಅಭಿನಂದಿಸಿ ಪ್ರೋತ್ಸಾಹಿಸಿದರು. ಕಾರ್ಯಕ್ರಮದ ನಂತರ ದೇವಸ್ಥಾನದ ವತಿಯಿಂದ ಪ್ರಸಾದ ವಿತರಣೆ ನಡೆಯಿತು. ಈ ಕಾರ್ಯಕ್ರಮಕ್ಕೆ ಆಗಮಿಸಿ ಕಲಾವಿದರನ್ನು ಪ್ರೋತ್ಸಾಹಿಸಿದ ಸಂಘದ ಸದಸ್ಯರಿಗೆ ಮತ್ತು ಎಲ್ಲ ಭಕ್ತಾದಿಗಳಿಗೆ ಕಾರ್ಯಕಾರಿ ಸಮಿತಿಯು ಧನ್ಯವಾದಗಳನ್ನರ್ಪಿಸುತ್ತದೆ.













# ಸಾಮಾನ್ಯರಲ್ಲಿ ಅಸಾಮಾನ್ಯರು

ಈಗಿನ ಕಾಲದ ದೈನಂದಿನ ಜಂಜಾಟ, ಸಂಸಾರದಲ್ಲಿನ ನೂರೆಂಟು ತಾಪತ್ರಯಗಳ ನಡುವೆ ಇದ್ದುದರಲ್ಲಿ ನೆಮ್ಮದಿ, ಹಸನ್ಮುಖತೆಗಳನ್ನು ತಮ್ಮ ಜೀವನದಲ್ಲಿ ರೂಢಿಸಿಕೊಂಡಿರುವವರು ಅಪರೂಪವಾಗಿ ಅಲ್ಲಲ್ಲಿ ನೋಡಸಿಗುತ್ತಾರೆ. ಗಮನಿಸಲು ಅವಶ್ಯವಾದ ವ್ಯವಧಾನ, ಸೂಕ್ಷ್ಮತೆ ನಮ್ಮಲ್ಲಿರಬೇಕಷ್ಟೆ.

ನಾವು ಪೌರಕಾರ್ಮಿಕರು ಎಂದು ಗುರುತಿಸುವ, ರಸ್ತೆ ಗುಡಿಸುವ ಕೆಲಸ ನೋಡುವವರಲ್ಲಿ ಒಬ್ಬರು ಈಕೆ. ಅನುದಿನವೂ ತನ್ನ ಪಾಡಿಗೆ ತಾನು ನಮ್ಮ ಮನೆಯ ಮುಂದಿನ ಮುಖ್ಯರಸ್ತೆಯ ಬದಿಯನ್ನು, ಫುಟ್ ಪಾತ್ ಅನ್ನು ಸ್ವಚ್ಛಗೊಳಿಸುವುದರಲ್ಲಿ ನಿರತರು.

ಆಗಾಗ ಅಂಗಳದೊಳಗಿನ ಕೆಲಸಕ್ಕೆ ಸಹಾಯ ಬೇಕೆಂದು ಕೋರಿಕೊಂಡಲ್ಲಿ ನಗುಮುಖದಿಂದಲೆ ಮಾಡಿಕೊಡುವ ನಿಧಾನಸ್ತೆ. ಗಂಟಿಕ್ಕಿದ ಮುಖ, ಬಿರುಸು ಮಾತು, ವಿನಾಕಾರಣ ಅನವಶ್ಯಕ ಮಾತು, ಕಥೆ ಅವೆಲ್ಲ ಇಲ್ಲವೇ ಇಲ್ಲ.

ಈ ಕಾರ್ಮಿಕರಿಗೆ ಸಾಮಾನ್ಯವಾಗಿ ಕೈಗೆ ಬರುವ ಹತ್ತು, ಹನ್ನೆರಡು ಸಾವಿರ ರೂ. ಗಳಲ್ಲಿ ಇಬ್ಬರು ಮಕ್ಕಳ ಸಂಸಾರವನ್ನು ನಿಭಾಯಿಸಬೇಕಾದ ಅನಿವಾರ್ಯತೆ.

ಯಾವುದೋ ಆಫೀಸ್‌ನಲ್ಲಿ ಸಣ್ಣ ಹುದ್ದೆ ನೋಡುತ್ತಿದ್ದ ಆಕೆಯ ಪತಿಗೆ ಕೋವಿಡ್‌ನಿಂದಾಗಿ ಕೆಲಸ ಹೋದಾಗ ಮನೆಯಲ್ಲಿ ಕುಳಿತು ಕಾಲಹರಣ ಮಾಡುವ ಬದಲು ಆತ ಆಯ್ದುಕೊಂಡದ್ದು ಪ್ರತಿದಿನವೂ ಪತ್ನಿಯನ್ನು ಕೆಲಸಕ್ಕೆ ಕರೆತರುವುದಲ್ಲದೆ ಸ್ವಂತ ಇಚ್ಛೆಯಿಂದ ಇಡೀ ದಿನ ಆಕೆಗೆ ಒತ್ತಾಸೆಯಾಗಿ ರಸ್ತೆ ಸ್ವಚ್ಛಗೊಳಿಸುವ ಕೆಲಸ!

ದಂಪತಿಗಳು ಬೆಳಗ್ಗೆ ಆರು ಘಂಟೆಗೆಲ್ಲ ಸ್ಕೂಟರ್‌ನಲ್ಲಿ ಗೋರಿಪಾಳ್ಯದಲ್ಲಿರುವ ಮನೆಯಿಂದ ಗಾಂಧಿಬಜಾರಿನ ಹಾಲಿನ ಬೂತ್ ಹತ್ತಿರ ಬಂದು ಹಾಜರಿ ಹೇಳಿ ನಂತರ ನಮ್ಮ ಮನೆಗೆ ಬಂದು ಅಂಗಳದಲ್ಲಿ ಅವರಿಗೆ ನೀಡಲ್ಪಟ್ಟಿರುವ ಸಣ್ಣ ಜಾಗದಲ್ಲಿ ತಾವು  ಜೋಪಾನವಾಗಿ ಇಟ್ಟುಕೊಂಡಿರುವ ಪೊರಕೆಗಳನ್ನು ಎತ್ತಿಕೊಂಡು ರಸ್ತೆ ಗುಡಿಸುವ ಅಂದಿನ ಕಾಯಕವನ್ನು ಶುರುಮಾಡುತ್ತಾರೆ. ನಮ್ಮಂಥವರು ಒಂದು ದಿನವೂ ಮಾಡಲು ಸಾಧ್ಯವಿಲ್ಲದ ಆ ಕೆಲಸವನ್ನು ಪ್ರತಿದಿನವೂ ಸತತವಾಗಿ ಮಾಡುತ್ತಾ, ಆಗಾಗ ಬೈಸಿಕಲ್ ಕಾಫಿಯಾತ ಬಂದು ನೀಡುವ ಪೇಯವನ್ನು ಸೇವಿಸುತ್ತಾ ಒಂದೈದು ನಿಮಿಷ ಒಟ್ಟಿಗೆ ವಿರಮಿಸುತ್ತಾರೆ.

ಗಂಡ, ಹೆಂಡತಿ ಇಬ್ಬರೂ ಅಷ್ಟೆ, ನೋಡಿದಾಗ ಸರಳ ಮುಗುಳ್ನಗೆ, ಅವಶ್ಯವಿದ್ದಷ್ಟು ಮಾತು, ಮಾತಿನಲ್ಲಿ ನಯ, ಮುಖದಲ್ಲಿ ಹಸನ್ಮುಖತೆ.

ಆಯಾ ದಿನದ ಕೆಲಸದ ನಂತರ ಮನೆಯ ಮುಂದಿನ ರಸ್ತೆಯ ಬದಿಯಲ್ಲಿ ಅಕ್ಕಪಕ್ಕ ಕುಳಿತು ಉಪಯೋಗಿಸಿದ ಪೊರಕೆಗಳನ್ನು ಒಪ್ಪಗೊಳಿಸುವುದನ್ನು ನೋಡುತ್ತಿದ್ದರೆ ಇವರಿಬ್ಬರ ನಡುವಿನ ಅನ್ಯೋನ್ಯತೆ ಗೋಚರವಾಗುತ್ತದೆ. ಸರಿಪಡಿಸಿದ ಪೊರಕೆಗಳನ್ನು ತಂದು ಅಂಗಳದೊಳಗೆ ನಿರ್ದಿಷ್ಟ ಸ್ಥಾನದಲ್ಲಿ ಜೋಪಾನವಾಗಿರಿಸಿ ಗೇಟ್ ಅನ್ನು ಮರೆಯದೇ ಮುಚ್ಚಿಕೊಂಡು ತಣ್ಣಗೆ ನಿರ್ಗಮಿಸುವ ಈ ಅನುರೂಪ ದಂಪತಿಗಳನ್ನು ನೋಡಿದರೆ ಹೃದಯ ತುಂಬಿಬರುತ್ತದೆ. ಸಣ್ಣ ಕೆಲಸವೋ ದೊಡ್ಡ ಕೆಲಸವೋ ಯೋಚಿಸದೇ ತಮಗೆ ವಿಧಿಸಲ್ಪಟ್ಟಿರುವ ಕಾಯಕವನ್ನು ಅನುದಿನವೂ ಶ್ರದ್ಧೆಯಿಂದ ಪೂರೈಸುವ, ಪರಸ್ಪರ ನೆರವಾಗುತ್ತ, ಸಾರ್ವಜನಿಕ ಸ್ಥಳವನ್ನು ಶುಚಿಗೊಳಿಸುವ ಕೆಲಸವನ್ನು ಚೊಕ್ಕವಾಗಿ ಮಾಡಿ ಮುಗಿಸುವ. ಸ್ಥಿತಪ್ರಜ್ಞರಂತೆ ತೋರುವ  ದಂಪತಿಗಳಿವರು.

ಒಮ್ಮೊಮ್ಮೆ ನಾವು ಹೇಳದಿದ್ದರೂ ಈಕೆ (ತನಗೆ ಕೊಂಚ ಬಿಡುವಿದ್ದಾಗ) ಮನೆಯ ಅಂಗಳದಲ್ಲಿನ ಕಸವನ್ನು ಗುಡಿಸಿ ಆಚೆಗೆ ಸಾಗಿಸುವುದುಂಟು.

ಈಚೆಗೆ ತಮ್ಮ ಮಗನ ವಿವಾಹಕ್ಕೆ ಬರಬೇಕೆಂಬ ಇವರ ವಿಶ್ವಾಸಪೂರ್ವಕ ಕರೆಯನ್ನು ಮನ್ನಿಸಿ ಮದುವೆಗೆ ಹಾಜರಾದಾಗ ಈ ದಂಪತಿಗಳು ತೋರಿದ ನಿರ್ಮಲ ಪ್ರೀತಿ ವಿಶ್ವಾಸಗಳನ್ನು ಮರೆಯುವಂತಿಲ್ಲ.

ತಮಗಿರುವ ಮಿತಿಗಳಲ್ಲಿಯೇ ಶಾಂತಿ, ಸಮಾಧಾನಗಳನ್ನು ಕಂಡುಕೊಂಡು ಉತ್ತಮ ಸಂಸ್ಕೃತಿಯ ಸರಳ, ನೆಮ್ಮದಿಯ ಜೀವನ ಸಾಗಿಸುತ್ತಿರುವ ಶ್ರೀಮತಿ ಅಂಜನಮ್ಮ ಮತ್ತು ಶ್ರೀ ಪೆದ್ದಪ್ಪ ದಂಪತಿಗಳಿಗೆ ಒಳ್ಳೆಯದಾಗಲಿ.



**ಬಿ.ಸುಬ್ರಹ್ಮಣ್ಯಂ**
**9449869667**

# ಸುಷುಪ್ತಿಯಿಂದ ಜಾಗೃತಿಗೆ

ಪ್ರತಿವರ್ಷ ಮಹಾಶಿವರಾತ್ರಿಯ ದಿನ ನಾವೆಲ್ಲ ಚಿಕ್ಕವರಿದ್ದಾಗ ಶಿವನ ದೇವಸ್ಥಾನಕ್ಕೆ ಹೋಗುವುದು ವಾಡಿಕೆ. ಹಾಗೇ ರಾತ್ರಿಯೆಲ್ಲಾ ಜಾಗರಣೆ ಮಾಡುತ್ತೇವೆ ಎನ್ನುವ ಬಗ್ಗೆ ಚರ್ಚೆ. ನಮ್ಮ ಮಿತವಾದ ಮತಿಯ ಪರಿಧಿಯಲ್ಲಿ ಪಂಥ ಕಟ್ಟುತ್ತಿದ್ದೆವು. (ಎಂದೂ ಸಫಲವಾಗಿಲ್ಲ, ಅದು ಬೇರೆ ಮಾತು!).

ನಾವಿದ್ದ ಬಡಾವಣೆಯಲ್ಲಿ ಶಿವರಾತ್ರಿಯ ದಿನ ಸಾಯಂಕಾಲ ಸೂರ್ಯ ಮುಳುಗಿದಾಗಿಂದ ಮಾರನೆಯ ದಿನ ಬೆಳಗಿನ ಜಾವದವರೆಗೆ ಐತಿಹಾಸಿಕ; ಪೌರಾಣಿಕ; ಸಾಮಾಜಿಕ; ನಾಟಕ, ಬಯಲಾಟ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದರು. ಅಲ್ಲಿನ ನಟ ಭಯಂಕರರು, ನಟನಾ ಶೂರರು, 'ರಾಮಾಣ್ಯ', 'ಮಆಭಾರ್ತ' ಆಟಗಳನ್ನು ನಮ್ಮೆಲ್ಲರ ಮುಂದೆ ಪ್ರದರ್ಶಿಸುತ್ತಿದ್ದರು. ಮನೆ, ಮನೆಗೆ ಬಂದು ಎಲ್ಲರನ್ನೂ ಪ್ರೀತಿಯಿಂದ ಆಹ್ವಾನಿಸಿ ಹೋಗುತ್ತಿದ್ದರು. ಈ ಒಂದು ಆಹ್ವಾನ ಸಾಕಲ್ಲ, ನಮಗೆ!

ಮನೆಯಲ್ಲಿ ದೊಡ್ಡವರು (ಹೆಂಗೆಳೆಯರು) ಕುಸು ಕುಸು ಅಂತ ಸ್ಕೆಚ್ ಹಾಕಿ, ಬೇಗ ಕೆಲಸ ಮುಗಿಸುತ್ತಿದ್ದರು. ನಾವೇನೂ ಸಾಮಾನ್ಯ ಅಲ್ಲ! ಚಾಪೆ, ದಿಂಬುಗಳ ಸಮೇತ ಸನ್ನದ್ಧರಾಗಿ ಅಲ್ಲಿಗೆ ವಕ್ಕರಿಸುತ್ತಿದ್ದೆವು. ಕೂತು, ಸರ್ಪಶಯನರಾಗಿ ಪವಡಿಸಿ, 'ಆಟ' ನೋಡಿ ಆನಂದಿಸುತ್ತಿದ್ದೆವು. ಮಧ್ಯ, ಮಧ್ಯದಲ್ಲಿ ಒಬ್ಬನೇ ನಟ ಎರಡು ಪಾತ್ರ ಮಾಡುವಾಗ ಕಾಸ್ಟ್ಯೂಮ್ ಬದಲಾಯಿಸುವ ಹೊತ್ತಿನಲ್ಲಿ ನಮ್ಮ ಏರಿಯಾ 'ತಗಾರರು' (ಸಂಗೀತಗಾರರು) ನಮ್ಮ ಕರ್ಣಗಳನ್ನು ತಮ್ಮ ಹಾಡುಗಾರಿಕೆಯಿಂದ ಪಾವನಗೊಳಿಸುತ್ತಿದ್ದರು.

ಇಂಥ ಒಂದು ಘನಂದಾರಿ ಕಾರ್ಯಕ್ರಮ ನಡೆಯುತ್ತಿದ್ದುದು ಎಲ್ಲಿ ? ದೊಡ್ಡ ಗಣೇಶನ ಗುಡಿ (ಬುಲ್ ಟೆಂಪಲ್ ರೋಡ್)ಯಿಂದ ಹನುಮಂತನಗರದ ಕಡೆ ತಿರುಗಿದಾಗ ಬರುವ ಸುಂಕೇನಹಳ್ಳಿ ರಸ್ತೆ. ರಸ್ತೆ ಇರುವುದೇಕೆ ? ಇಂಥ ಘನಂದಾರಿ ಕಾರ್ಯಕ್ರಮಗಳಿಗೇ ಮೀಸಲು ! ಅಕ್ಕ (ನಮ್ಮ ತಾಯಿ), ಸರೋಜ (ನಮ್ಮ ಚಿಕ್ಕಮ್ಮ) ಶಶಿ, ಸರಸಿ, ನಾನು ಎಲ್ಲ ಸಂಭ್ರಮದಿಂದ, ಸಡಗರದಿಂದ ಪಾಲ್ಗೊಳ್ಳಲು ಹೋಗುತ್ತಿದ್ದೆವು. ಅಕ್ಕಪಕ್ಕದ ಮನೆಯವರೂ ಬರುತ್ತಿದ್ದರು – MORE THE MERRIER !

ಬಯಲಾಟ ಶುರು. ಸಾಮಾನ್ಯವಾಗಿ 'ಗದಾಯುದ್ಧ' ಪ್ರಸಂಗ ವರ್ಷಾನುಗಟ್ಟಲೆಯಿಂದ ಮಾಡಿರುವ popular ಭಾಗ. ಭೀಮನು ಗದೆಯನ್ನು ತಿರುಗಿಸುವಾಗ, ಅದರ ತಲೆ ಬಂದು ನಮ್ಮ ಮಧ್ಯೆ ಬೀಳುವುದು; ದುರ್ಯೋಧನ ತೊಡೆ ತಟ್ಟಿ ಭೀಮನನ್ನು ಅಪಹಾಸ್ಯ ಮಾಡುವಾಗ ಅವನ ಮೀಸೆ ಜಾರಿ ಬೀಳುವುದು; ಇಬ್ಬರೂ ಗದಾಯುದ್ಧ ಮಾಡುವಾಗ ಅವರ ಕಿರೀಟ ಸೊಟ್ಟಗಾಗುವುದು – ಇದೆಲ್ಲ ನಮ್ಮ ನಗುವಿಗೆ ಸರಕು! ಒಮ್ಮೆ ಭೀಮ–ದುರ್ಯೋಧನರು ಗಧೆ ನೆಲಕ್ಕೂರಿ, ತಲೆಗಳನ್ನು ಹತ್ತಿರ ತಂದು, ಒಬ್ಬರನ್ನೊಬ್ಬರು ದುರುಗುಡುವ ಜಾಗದಲ್ಲಿ ನಾವು, "ಥೂ! ಪರದೆ ಹಿಂದೆ ಬೀಡಿ ಹೊಡ್ಕೊಂಡು ಬಂದಿರ್ತಾರೆ! ಹೇಗೆ ವಾಸನೆ ಸಹಿಸ್ಕೊತಾರೋ"? ಅಂತಾನೋ, "ತಲೆಗಳನ್ನು ಹತ್ರ ತಂದು, ತಲೆ ಜೋರಾಗಿ ಹೊಡ್ಕೊಂಡ್ರೆ ಟೋಫನ್ ಬಿದ್ದು ಬಿಡುತ್ತೆ" ! ಅಂತ ಜೋರಾಗಿ ನಗೋದು !

ಬಾಲ್ಯದಲ್ಲಿ ಇಂತಹವೇ ತಮಾಷೆಗಳು ಬಹಳ ಸಂತೋಷಕೊಡುತ್ತಿದ್ದವು. ಬಾಲ್ಯವನ್ನು ಸಮೃದ್ಧ ಮಾಡುತ್ತಿದ್ದವು.

'ರಾಮಾಣ್ಯ' ಆಟ ಆದರೆ – ಶಬರಿಕಾಶ್ರಮದ ದೃಶ್ಯದಲ್ಲಿ ಶಬರಿ (ಪಾತ್ರಧಾರಿ–ಅವನು) ರಾಮನಿಗೆ ಪ್ರತಿ ಹಣ್ಣು ರುಚಿ ನೋಡಿ, "ಸಿಹಿಯಾಗಿದೆ, ತೊಗೋ, ತಿನ್ನು", ಅಂತಹ ಹೇಳಿದರೆ – ನಾವು, "ಅಯ್ಯೋ! ಎಂಜಲು ತಿಂತಾರೆ!" ಅಂತ ಕೂಗೋದು.

ಇನ್ನು ರಾವಣ ಸೀತೆಯನ್ನು ಹಾರಿಸಿಕೊಂಡು ಹೋಗಲು ಬಂದಾಗ (ಸೀತಾಪಹರಣ ಭಾಗ), ಪ್ರೇಕ್ಷಕರಾಗಿ ನಾವು, "ಲೇ ಕಳ್ಳ ಸನ್ಯಾಸಿ!" ಅಂತ ಕೂಗಿ, ಬೇರೆ ನಮ್ಮ ಸುಂಕೇನಹಳ್ಳಿ ಅಮಾಯಕ ಪ್ರೇಕ್ಷಕರ ಏಕಾಗ್ರತೆ ಮತ್ತು ಸೀತಾಪಹರಣದ ಕಾವ್ಯಾನುಭವ ನಾಶಮಾಡುತ್ತಿದ್ದೆವು! ಈಗ ಅದನ್ನೆಲ್ಲ ಜ್ಞಾಪಿಸಿಕೊಂಡಾಗ, ನಮ್ಮ ಸ್ವಾತಂತ್ರ್ಯದ ದುರುಪಯೋಗ ಮತ್ತು ಅವರ ಮುಗ್ಧತೆಯನ್ನು ಚಿಂದಿ ಮಾಡುತ್ತಿದ್ದುದರ ಬಗ್ಗೆ ಕೆಡಕೆನಿಸುತ್ತದೆ.

ಇಷ್ಟು ವರುಷಗಳುರುಳಿ ಜಗತ್ತಿನ ನಡಾವಳಿಗಳು, ನನ್ನ ಜೀವನದ ಅನುಭವಗಳು, ನನ್ನ ವಯಸ್ಸು – ನನ್ನ ಅಪ್ರಬುದ್ಧ ನಡುವಳಿಕೆಗಳು ಅದೂ ಶಿವರಾತ್ರಿಯ ದಿನ – ಅವಮಾನಿಸುತ್ತವೆ.

ನಾನು ಸ್ವಭಾವತಃ ಬಹಳ religious ಏನೂ ಅಲ್ಲ. ಬೇರೆಯವರಂತೆ ಬಹಳ ನೇಮ, ನಿಷ್ಠೆಯಿಂದ ಪೂಜೆ, ಪುನಸ್ಕಾರ ಮಾಡುವುದು, ದೇಗುಲಗಳಿಗೆ ನಿತ್ಯ ಹೋಗುವುದು ಮಾಡಿಲ್ಲ. ಆದರೆ, ಶಿವನನ್ನು ನನ್ನದೇ ಆದ ರೀತಿಯಲ್ಲಿ ಆರಾಧಿಸುತ್ತೇನೆ. ಬಲವಾಗಿ ನನ್ನನ್ನು ಎಲ್ಲಾ ಸಂಕಷ್ಟಗಳಿಂದಲೂ ಅವನೇ bail out ಮಾಡಿದ್ದಾನೆ, ಮಾಡುತ್ತಾನೆ ಎಂದು ನಂಬಿದ್ದೇನೆ. ಅವನೇ ನನಗೆ ಮಾತಾ–ಪಿತಾ; ಬಂಧು–ಸಖ! ಅವನು ಮಹಾಯೋಗಿ, ಹಾಗೇ, ಘೋರ ಕುಟುಂಬಿ! ಅವನ ಕುಟುಂಬ ವೈರುಧ್ಯಗಳ ಆಗರ.

ಅವನು ಸುಷುಪ್ತಿ! ಅವನೇ ಜಾಗೃತಿ! ಮೌನ–ಮಾತು; ನಿಶ್ಯಬ್ಧ–ಎಚ್ಚರ; ಜ್ಞಾನ–ಅಜ್ಞಾನ; ತಾಮಸ ವಿವೇಕ; ಈ ಎಲ್ಲದರ ಸಮನ್ವಯ – ಶಿವ! ಜಡಭರತನಂತವರಿಗೂ, ರಾವಣನಂತಹವರಿಗೂ ಅವನು ಆರಾಧ್ಯ ದೈವ!



**ಎಸ್. ರಾಜಲಕ್ಷ್ಮಿ**
**9845371961**

# ಅಮೇರಿಕಾದಲ್ಲಿ ನಾನು ಕಂಡ ಹಿಂದೂ ದೇವಾಲಯಗಳು



**ಕಂತು 3 ಶ್ರೀ ಶಾರದಾ ದೇವಾಲಯ**

ಪೆನ್ಸಿಲ್ವೇನಿಯ ಎಂಬುದು ಅಮೆರಿಕದ 50 ರಾಜ್ಯಗಳಲ್ಲಿ ಒಂದು. ಇಲ್ಲಿ ಸ್ಟ್ರೌಡ್ ಬರ್ಗ್ ಎಂಬ ಊರಿನಲ್ಲಿ ಶೃಂಗೇರಿ ವಿದ್ಯಾಭಾರತಿ ಫೌಂಡೇಶನ್ ಎಂಬ ಧಾರ್ಮಿಕ ಮತ್ತು ದತ್ತಿ ಸಂಸ್ಥೆಯಿದೆ. ಇದು ಈಗಿನ ಶ್ರೀ ಶ್ರೀ ಭಾರತಿತೀರ್ಥರು ಹಾಗೂ ಅವರ ಗುರುಗಳಾದ ಶ್ರೀ ಅಭಿನವ ವಿದ್ಯಾತೀರ್ಥರ ಹೆಸರನ್ನು ಸೇರಿಸಿ ಪ್ರಾರಂಭವಾಗಿದೆ. ಭಾರತದ ಹೊರಗಡೆ ಪ್ರಾರಂಭವಾದ ಮೊಟ್ಟಮೊದಲ ಶೃಂಗೇರಿ ಮಠದ ಅಂಗಸಂಸ್ಥೆ ಇದಾಗಿದೆ. ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ ಆಶೀರ್ವಾದ ಮತ್ತು ಮಾರ್ಗದರ್ಶನ ಪಡೆದಿದೆ.

ನಮ್ಮ ಕರ್ನಾಟಕದ ಶೃಂಗೇರಿ ಇರುವಂತೆಯೇ ಇದು ಸಹ ಪ್ರಶಾಂತ ವಾತಾವರಣದಲ್ಲಿದೆ. ಎರಡರ ಪರಿಸರವೂ ಒಂದೇ ರೀತಿಯದಾಗಿದ್ದು ವಿಸ್ಮಯಜನಕವಾಗಿದೆ. ಇಲ್ಲಿ ಪೊಕೊನೋ ಬೆಟ್ಟದ ಬಳಿಯಲ್ಲಿ 35 ಎಕರೆ ಪ್ರದೇಶವನ್ನು ಕೊಳ್ಳಲಾಯಿತು. 13 ಜುಲೈ 1995 ರಂದು ದೇವಿ ಶಾರದಾಂಬೆ, ಮಹಾಗಣಪತಿ ಮತ್ತು ಆದಿ ಶಂಕರರ ಪ್ರತಿಷ್ಠಾಪನೆಯು ನಡೆಯಿತು. ನಮ್ಮ ಸನಾತನ ಧರ್ಮದ ಆಧ್ಯಾತ್ಮಿಕತೆ ಮತ್ತು ಮೌಲ್ಯಗಳನ್ನು ವಿದೇಶದಲ್ಲಿ ಅದರಲ್ಲೂ ಯು.ಎಸ್.ಎ.ನಲ್ಲಿ ಹಬ್ಬಿಸುವುದು ಈ ಸಂಸ್ಥೆಯ ಪ್ರಮುಖ ಉದ್ದೇಶ. ಭಾರತದಲ್ಲಿ ಇರುವಂತೆಯೇ ಚತುರಾಮ್ನಾಯ ಪೀಠಗಳನ್ನು ಸ್ಥಾಪಿಸುವ ಉದ್ದೇಶ ಹೊಂದಿದ್ದು, ಇನ್ನೂ ಮೂರು ಪೀಠಗಳನ್ನು ಡೆಟ್ರಾಯಿಟ್, ಟೆಕ್ಸಾಸ್ ಮತ್ತು ಸ್ಯಾಂಟಿಯಾಗೊ ಎಂಬ ಸ್ಥಳಗಳಲ್ಲಿ ಸ್ಥಾಪಿಸಲಾಗುವುದಂತೆ. ಈ ವಿಷಯವನ್ನು ಕೇಳಿ ನನಗೆ ಅತೀವ ಹರ್ಷ ಮತ್ತು ಹೆಮ್ಮೆಯಾಯಿತು. ಇಲ್ಲಿನ ಅರ್ಚಕರಿಗೆ ಅಲ್ಲೇ ವಾಸಿಸಲು ಮನೆಗಳಿದ್ದು, ಒಂದು ಗೋಶಾಲೆಯೂ ಇದೆ. ಇಲ್ಲಿನ ಹಸುಗಳಿಂದ ದೊರೆತ ಉತ್ಪನ್ನಗಳನ್ನೇ ದೇವರ ಅಭಿಷೇಕ ಹಾಗೂ ನೈವೇದ್ಯಕ್ಕೆ ಬಳಸುವುದು ಇಲ್ಲಿನ ವಿಶೇಷತೆ.

ಪ್ರತಿ ದಿನ ಬೆಳಿಗ್ಗೆ 8.30 ರಿಂದ 11.30 ಹಾಗು ಸಂಜೆ 4.30 ರಿಂದ 8.30 ರವರೆಗೆ ದೇವಾಲಯ ತೆರೆದಿದ್ದು ಬೆಳಿಗ್ಗೆ 10 ಗಂಟೆಗೆ ಅಭಿಷೇಕ, 11.30ಕ್ಕೆ ಮಹಾಮಂಗಳಾರತಿ ಇರುತ್ತದೆ. ನಮ್ಮ ಶೃಂಗೇರಿಯಲ್ಲಿ ನಡೆಯುವಂತೆಯೇ ಇಲ್ಲೂ ಸಹ ಅನ್ನಪ್ರಾಶನ, ನಾಮಕರಣ, ಅಕ್ಷರಾಭ್ಯಾಸ, ಉಪನಯನ, ಮದುವೆ, ಹೋಮಗಳು ನಡೆಯುತ್ತವೆ.

ರಥಸಪ್ತಮಿ, ಮಹಾಶಿವರಾತ್ರಿ, ಶಂಕರ ಜಯಂತಿ, ವ್ಯಾಸ ಪೂರ್ಣಿಮೆ, ಉಪಾಕರ್ಮ, ಗಾಯತ್ರಿ ಹೋಮ, ನವರಾತ್ರಿಯಲ್ಲಿ ಚಂಡಿಹೋಮ, ದೀಪಾವಳಿಯಲ್ಲಿ ಮಹಿಳೆಯರಿಂದ ದೀಪ ಪೂಜೆ ಎಲ್ಲವು ಇಲ್ಲಿ ಸಾಂಗವಾಗಿ ನಡೆಯುತ್ತವೆ.

ಇಷ್ಟಲ್ಲದೆ ಇಲ್ಲಿ ಶ್ರೀ ಭಾರತಿ ತೀರ್ಥ ವಿದ್ಯಾಲಯವಿದ್ದು, ಶನಿವಾರದಂದು ಶಾಲೆಯು 12 ರಿಂದ 4.30 ರವರೆಗೆ ನಡೆಯುವುದು. ನರ್ಸರಿಯಿಂದ 8 ನೇ ತರಗತಿಯವರೆಗಿನ ಮಕ್ಕಳಿಗೆ ಸಂಸ್ಕೃತ, ಹಿಂದಿ ಮತ್ತು ತಮ್ಮ ತಮ್ಮ ಮಾತೃಭಾಷೆ ಕಲಿಸಲಾಗುವುದು. ಜೊತೆಗೆ ಭಾರತದ ಭೂಗೋಳ ಮತ್ತು ಚರಿತ್ರೆಯನ್ನು ಐಚ್ಛಿಕ ವಿಷಯಗಳಾಗಿ ಕಲಿಯುವ ಅವಕಾಶವಿದೆ. ಸಾರ್ವತ್ರಿಕ ಮೌಲ್ಯಗಳನ್ನು ಮಕ್ಕಳಲ್ಲಿ ಮೂಡಿಸುವ ಸಲುವಾಗಿ ಪಂಚತಂತ್ರದ ಕತೆಗಳು, ರಾಮಾಯಣ, ಮಹಾಭಾರತ, ಶ್ಲೋಕಗಳು, ಭಗವದ್ಗೀತೆ ಇವುಗಳನ್ನೂ ಪಠ್ಯಕ್ರಮದಲ್ಲಿ ಅಳವಡಿಸಲಾಗಿದೆ. 8ನೇ ತರಗತಿ ಮುಗಿಸಿದ ವಿದ್ಯಾರ್ಥಿಗೆ ಒಂದು ಸರ್ಟಿಫಿಕೇಟ್ ನೀಡುವರು. ಮುಂದೆ ಈ ಮಕ್ಕಳೇ ಯುವ ಸ್ವಯಂಸೇವಕರಾಗಿ, ಮಾರ್ಗದರ್ಶಿಗಳಾಗಿ ಇಲ್ಲಿನ ಉಪಾಧ್ಯಾಯರಿಗೆ ಸಹಾಯ ಮಾಡುವರು.

ಸನಾತನ ಧರ್ಮದ ಮೂಲೋದ್ದೇಶವೇನೆಂದರೆ ವಿಶ್ವದ ಸಕಲ ಚರಾಚರಗಳಲ್ಲಿಯೂ ಶಾಂತಿ ಮತ್ತು ಸಾಮರಸ್ಯ ಉಂಟು ಮಾಡುವುದೇ ಆಗಿದೆ. ಪಶ್ಚಿಮದಲ್ಲಿ ಇದೇ ಮೊದಲ ಶೃಂಗೇರಿ ಮಠವಾಗಿದ್ದು ವಿದ್ಯಾಧಿದೇವತೆಯಾದ ಶಾರದೆ, ಆಧ್ಯಾತ್ಮಿಕ ಗುರು ಶ್ರೀ ಶಂಕರರು ಹಾಗು ಶ್ರೀ ಮಹಾಗಣಪತಿ ಈ ಮಠದಲ್ಲಿದ್ದು ಎಲ್ಲರನ್ನೂ ಆಶೀರ್ವದಿಸುತ್ತಿರುವರು. ಡಾ॥ ಎಸ್. ಯಜ್ಞ ಸುಬ್ರಹ್ಮಣ್ಯಂರವರು ಇದರ ಛೇರ್ಮನ್ ಆಗಿದ್ದು ಅವರ ಮಾರ್ಗದರ್ಶನದಲ್ಲಿ ಸಂಸ್ಥೆಯು ಅತ್ಯುತ್ತಮ ಕಾರ್ಯ ನಿರ್ವಹಿಸುತ್ತಿದೆ. ನವರಾತ್ರಿಯಲ್ಲಿ ಈ ಮಠಕ್ಕೆ ನಾನು ಭೇಟಿ ಕೊಟ್ಟಾಗ ದೇವಿಗೆ ಮಾಡಿದ್ದ ಮಯೂರ ವಾಹನ ಅಲಂಕಾರ ಬಹಳ ಆಕರ್ಷಣೀಯವಾಗಿತ್ತು. ಸಂಜೆಯ ಸಮಯವಾಗಿದ್ದು, ನಾವು ಅಲ್ಲಿಯೇ ಕುಳಿತು ಲಲಿತಾ ಸಹಸ್ರನಾಮದ ಪಠಣ ಮಾಡಿದೆವು. ಮಂಗಳಾರತಿ ಪಡೆದು ಅಲ್ಲಿಂದ ಹೊರಡುವಾಗ್ಗೆ ರಾತ್ರಿ 8.30 ದಾಟಿತ್ತು. ಮನವಂತೂ ಭಕ್ತಿ ಭಾವದಿಂದ ತುಂಬಿತ್ತು.



ಬಿ.ಈ.ಸೀತಾಲಕ್ಷ್ಮಿ
9980196470

# ಬೆಳೆಯುವ ಪೈರು ಮೊಳಕೆಯಲ್ಲಿ

ಮಾನವನ ವ್ಯಕ್ತಿತ್ವ ಅವನ ಬಾಲ್ಯದಿಂದ ಸುತ್ತಮುತ್ತಲಿರುವ ಶಿಕ್ಷಕರ, ಪಾಲಕರ ಹಾಗೂ ಸಮಾಜದ ಜನರ ಪ್ರಭಾವದಿಂದ ಆಗಿರುತ್ತದೆ. ಶಿಕ್ಷಣ ಒಂದೇ ಸಾಲದು, ಅದರ ಜೊತೆ ಇನ್ನೂ ಅನೇಕ ಅಂಶಗಳನ್ನು ಬಾಲ್ಯದಿಂದ ರೂಢಿಸಿಕೊಂಡರೆ, ಆತ ಯಶಸ್ವಿ ಪುರುಷನೆಂದೆನಿಸಿಕೊಳ್ಳುತ್ತಾನೆ. ಶಿಕ್ಷಕರು ಮಕ್ಕಳ ಅವಶ್ಯಕತೆಗೆ ತಕ್ಕಂತೆ ಚಟುವಟಿಕೆಗಳ ಮೂಲಕ "ಕಲಿ–ನಲಿ" ಶಿಕ್ಷಣವನ್ನು ನೀಡುವ ಪದ್ಧತಿಯನ್ನು ಅನುಸರಿಸಿದರೆ, ಮಕ್ಕಳ ಭವಿಷ್ಯಕ್ಕೆ ಶಿಕ್ಷಣ ಸಹಕಾರವಾಗುತ್ತದೆ. ಮಕ್ಕಳ ಬೆಳವಣಿಗೆಯಲ್ಲಿ ಪಾಲಕರು ಬಹುದೊಡ್ಡ ಕೊಡುಗೆಯನ್ನು ನಿಭಾಯಿಸುತ್ತಾರೆ. ಇದರಿಂದ ಮಕ್ಕಳ ಕಲಿಕೆ ಹಾಗೂ ಬೆಳವಣಿಗೆಯಲ್ಲಿ ಒಳ್ಳೆಯ ಅಭಿವೃದ್ಧಿಯನ್ನು ಕಾಣಬಹುದು. ಓದುವುದು ಒಂದು ಒಳ್ಳೆಯ ಹವ್ಯಾಸ. ಚಿಕ್ಕಂದಿನಿಂದಲೇ ಇದನ್ನು ರೂಢಿಸಿಕೊಂಡರೆ ಒಳ್ಳೆಯ ಜ್ಞಾನದ ಜೊತೆಗೆ ಕಲ್ಪನಾ  ಶಕ್ತಿ ಸಹ ಅಭಿವೃದ್ಧಿಯಾಗುತ್ತದೆ. ಮಕ್ಕಳಿಗೆ ಕತೆ ಕೇಳುವುದು ಇಷ್ಟವಾದ್ದರಿಂದ ಪಾಲಕರು ದಿನವೂ ರಾತ್ರಿ ಕತೆ ಹೇಳಬಹುದು. ಪಾತ್ರದ ಬಗ್ಗೆ ವಿವರಿಸಿ ಮಕ್ಕಳ ಯೋಚನೆ, ಕಲ್ಪನಾ ಶಕ್ತಿಯನ್ನು ಹೆಚ್ಚಿಸಬಹುದು. ಮಕ್ಕಳಿಗೆ ಶಿಶು ಗೀತೆಗಳನ್ನು ಕೇಳಿಸಿಕೂಂಡು ತಮ್ಮದೇ ಆದ ರೀತಿಯಲ್ಲಿ ನರ್ತಿಸಲು, ಅಭಿನಯಿಸಲು ಹೇಳುವುದರಿಂದ, ಮಕ್ಕಳ ಕಲ್ಪನಾ ಶಕ್ತಿಗೆ ಉಪಯೋಗವಾಗುತ್ತದೆ. ಗಣಿತದ ಮೂಲಗಳನ್ನು ಸರಿಯಾಗಿ ಅರ್ಥೈಸಿಕೊಂಡರೆ, ಶೈಕ್ಷಣಿಕ ಜೀವನದಲ್ಲಿ ಯಶಸ್ಸು ಖಚಿತ. ಚಟುವಟಿಕೆಯ ಮೂಲಕ ಆಟವಾಡುತ್ತಾ , ಆಕಾರ, ಬಣ್ಣ, ಗಾತ್ರದ ಬಗ್ಗೆ ತಿಳಿಯುತ್ತಾರೆ. ಅರಿವಿನ ಶಕ್ತಿಗೆ ದೈನಂದಿನ ಸನ್ನಿವೇಶಗಳ ಬಗ್ಗೆ ಪ್ರಶ್ನಿಸಿದರೆ ಆಟ, ಬಣ್ಣ, ಅತಿಥಿಗಳೊಂದಿಗೆ ಮಾತುಕತೆಯಿಂದ ಮಕ್ಕಳಲ್ಲಿ ಪ್ರಶ್ನೆಗಳಿಗೆ ಉತ್ತರ, ಮಾಹಿತಿ ಸಂಗ್ರಹಣೆ, ಜ್ಞಾಪಕ ಶಕ್ತಿಗೆ ಗಮನ ಕೊಡುವುದು ಮುಂತಾದ ಗುಣಗಳು ಹೆಚ್ಚುತ್ತವೆ. ಜಿಗಿತ, ಓಟ, ಮೆಟ್ಟಲು ಹತ್ತುವುದು, ಇಲ್ಲವೇ ಮರಗಳನ್ನು ಹತ್ತಿಸುವುದರಿಂದ ಮಕ್ಕಳ ಹೆದರಿಕೆ ದೂರವಾಗುವುದು ಹಾಗೂ ದೈಹಿಕ ಸಮತೋಲನವನ್ನು ನಿಭಾಯಿಸುವುದು ತಿಳಿಯುತ್ತದೆ. ಮಕ್ಕಳ ಜೊತೆ ಸಂಭಾಷಿಸುವಾಗ ಅವರ ಮಾತುಗಳನ್ನು ಪೂರ್ತಿಯಾಗಿ ಕೇಳಿಸಿಕೊಳ್ಳಬೇಕು. ಚಿಕ್ಕ ಕಥೆ, ಹಾಡುಗಳನ್ನು ಹೇಳುವುದು, ಕೇಳುವುದು ಆಟದ ಮೂಲಕ ಬೆಂಬಲಿಸಬೇಕು. ಇದರಿಂದ ಶಬ್ದಗಳ ಸರಿಯಾದ ಉಚ್ಚಾರಣೆ ಸಂಭಾಷಣೆಯನ್ನು ಹೇಗೆ ಪ್ರಾರಂಭಿಸಬೇಕು, ವಿವರಿಸಬೇಕು, ಹೇಗೆ ಮುಕ್ತಾಯಗೊಳಿಸಬೇಕು ಎಂದು  ತಿಳಿಯುತ್ತಾರೆ. ಮಕ್ಕಳಿಗೆ ಜೀವನದ ಒಳ್ಳೆಯ ಮೌಲ್ಯಗಳನ್ನು ಕಲಿಸಿ, ಮುಂದಿನ ಪೀಳಿಗೆಯ ಮಕ್ಕಳು ಸಹ ಸುರಕ್ಷಿತವಾಗಿ ಆರೋಗ್ಯದಿಂದ ಇರಲು ತಿಳಿಸಬೇಕು. ಚಿಕ್ಕ ಚಿಕ್ಕ ವಿಷಯಗಳಲ್ಲಿ ಮಕ್ಕಳ ಅಭಿಪ್ರಾಯ ಕೇಳುವುದು, ಸರಳವಾಗಿ ಕೆಲಸಗಳನ್ನು ಮಾಡಲು ಹೇಳುವುದು, ಇದರಿಂದ ಮಕ್ಕಳು ಸಹ ಸ್ವಂತ ನಿರ್ಧಾರ ತೆಗೆದುಕೊಳ್ಳಲು ತಯರಾಗುತ್ತಾರೆ. ಬೆಳೆಯುವ ಪೈರು ಮೊಳಕೆಯಲ್ಲೇ ಎಂಬಂತೆ ಉಜ್ವಲ ಭವಿಷ್ಯಕ್ಕೆ ಭದ್ರ ಬುನಾದಿಯನ್ನು ಹಾಕೋಣ, ಮಕ್ಕಳನ್ನು ಒಳ್ಳೆಯ ವ್ಯಕ್ತಿಗಳನ್ನಾಗಿ ಬೆಳೆಸುವುದರಲ್ಲಿ ಗೆಲ್ಲೋಣ ಏನಂತೀರಾ?



**ಸಂಧ್ಯಾ ನಾಗರಾಜ್**
**9980224796**

**********************************************************************************************



**ಸಂಘದ ಸದಸ್ಯ ಶ್ರೀ ಆರ್. ಎಸ್. ಮಹೇಶ್‌ರವರ ಪುತ್ರ ಚಿ ಸಾತ್ವಿಕ್‌ರವರು ಪೆನ್ಸಿಲ್‌ನಿಂದ ರಚಿಸಿದ ಚಿತ್ರಗಳು**

# ನಮ್ಮನ್ನಗಲಿದ ನಮ್ಮವರಿಗೆ ಗೌರವಪೂರ್ಣ ಶ್ರದ್ಧಾಂಜಲಿ



**ಪದ್ಮಾ ಸತ್ಯಮೂರ್ತಿ** (85) 21.4.2023
ದಿವಂಗತ ಸತ್ಯಮೂರ್ತಿರವರ ಪತ್ನಿ

**ಪಾರ್ವತಿ ವಿಜಯಸಾರಥಿ** (65) 5.5.2023
ಸಂಘದ ಪೋಷಕ ಡಾ॥ ಜಿ. ಸ್ವಾಮಿನಾಥ್‌ರವರ ಅತ್ತಿಗೆ
ಹಾಗೂ ದಿವಂಗತ ಆರ್.ಜಿ.ವಿಜಯಸಾರಥಿರವರ ಪತ್ನಿ





**ಎಸ್. ಸರಸ್ವತಮ್ಮ** (91) 11.5.2023
ಸಂಘದ ಸದಸ್ಯ ಹಾಗೂ ಹಿಂದಿನ
ಕಾರ್ಯಕಾರಿ ಸಮಿತಿ
ಸದಸ್ಯ ಶ್ರೀ ಟಿ.ಎಸ್.ರಮೇಶ್‌ರವರ ತಾಯಿ

**ಸುಂದರಯ್ಯ** (98) 20.5.2023
ದಿವಂಗತ ಜಿ.ಕೆ.ನಾಗರಾಜ್‌ರವರ ಸಹೋದರ





**ಟಿ.ವಿ. ರಾಮಕೃಷ್ಣ** (64) 25.5.2023
ದಿವಂಗತ ಟಿ. ಛಾಯಾಪತಿರವರ
ಸೋದರ ಸಂಬಂಧಿ



**ರತ್ನ ತಿರುಮಲಯ್ಯ** (83) 28.5.2023
ಸದಸ್ಯ ಶ್ರೀ ಎಸ್.ವಿ. ಶೇಷಾದ್ರಿರವರ ದೊಡ್ಡಮ್ಮ

**ಟಿ.ಎಸ್. ಲಕ್ಷ್ಮಣಸ್ವಾಮಿ** (86) 07.06.2023
ಸದಸ್ಯ ಶ್ರೀ ಟಿ.ಎಲ್. ಚಂಪಕಧಾಮರವರ ತಂದೆ





**ಟಿ.ಎಸ್. ಕೃಷ್ಣನ್** (83) 14.07.2023
ಸಂಘದ ಹಿಂದಿನ ಕಾರ್ಯಕಾರಿ
ಸಮಿತಿ ಹಿರಿಯ ಸದಸ್ಯ

**ನಾಗಮಣಿ** (58) 20.07.2023
ಶ್ರೀ ಡಿ.ಎಸ್. ಶಂಕರ್‌ರವರ ಪತ್ನಿ



*****************************************************************************************

# ಸಾಂತ್ವನ ನಿಧಿ – ಮನದ ಮಾತು

ನಮ್ಮ ಬೃಹಚ್ಚರಣ ಸಂಘದಿಂದ ಒಂದು ಮನಃಪೂರ್ವಕ ಮಾನವೀಯ ಉಪಯುಕ್ತ ಪರಿಕಲ್ಪನೆ ಹಾಗೂ ಪ್ರಯೋಗಾತ್ಮಕಾನ್ವಯ:

ನಮ್ಮ ಸಂಘದ ಸದಸ್ಯರ ಕುಟುಂಬದಲ್ಲಿ ಅಕಸ್ಮಾತ್ ಸಾವು ಉಂಟಾದ ಸಂದರ್ಭಗಳಲ್ಲಿ ನಮ್ಮ ಸಂಘದ ಪದಾಧಿಕಾರಿಗಳೀರ್ವರು ತಕ್ಷಣ ಸಾವು ಸಂಭವಿಸಿರುವ ಮನೆಗೆ ಖುದ್ದು ಭೇಟಿ ನೀಡಿ ಮೃತವ್ಯಕ್ತಿಗಳ ನಿಕಟ ಬಂಧುಗಳಿಗೆ ನಮ್ಮ ನಿಮ್ಮೆಲ್ಲರ ಪರವಾಗಿ ಸಂಘದ ವತಿಯಿಂದ ಸಾಂತ್ವನದ ಮಾತುಗಳನ್ನು ಹೇಳುತ್ತಾ ಒಂದು ಸಾಂಕೇತಿಕ ಹಣದ ಥೈಲಿಯೊಂದಿಗೆ ಬಂದಿರುವ ಪದ್ಧತಿ ತುಂಬಾ ಭರವಸೆಯ ಸ್ಥಿತಿಯಾಗಿದೆ. ಮೃತ್ಯು ಎರಗಿದಾಗ ಆ ಮನೆಯವರು ಏನೂ ತೋಚದ ಹಾಗೂ ದಿಕ್ಕೆಟ್ಟು ನೊಂದ ಪರಿಸ್ಥಿತಿಯಲ್ಲಿರುವರು. ಅಂತಹ ಆತಂಕ ತಲ್ಲಣದ ಸಂದರ್ಭಗಳಲ್ಲಿ ಅದಕ್ಕೆ ಈಡಾದ ವ್ಯಕ್ತಿಗೆ ಹಣದ ಥೈಲಿ ಹಾಗೂ ಸಾಂತ್ವನದ ಮಾತುಗಳನ್ನು, ಒಂದು ಜನಸಮೂಹವನ್ನು ಪ್ರತಿನಿಧಿಸುವ ಒಂದು ಜವಾಬ್ದಾರಿಯುತ ಸಂಘವು ಹೇಳುವುದರ ಮೂಲಕ ನೈತಿಕ ಬೆಂಬಲ ಸೂಚಿಸುವುದು ನಿಜಕ್ಕೂ ಅತ್ಯಂತ ಅಗತ್ಯವೂ ಉಪಯುಕ್ತವೂ ಆದ ಒಂದು ಸಾತ್ವಿಕ ಪರಿಕಲ್ಪನೆಯ ಚಟುವಟಿಕೆಯಾಗಿದೆ.

ಹಾಗೆಯೇ ಅಪರಕ್ರಿಯಾಸಹಾಯೀ ಆರ್ಯಾವರ್ತ ಸಂಸ್ಥೆಗೆ ನಮ್ಮೆಲ್ಲರ ಪರವಾಗಿ ನಮ್ಮ ಸಂಘವು ಒಂದು ಶವವಾಹನ ದಾನ ಮಾಡಿರುವುದು ಕೂಡ. ಇಂತಹ ಜೀವಂತ ಸಕ್ರಿಯ ಮಾನವೀಯ ಪರಿಕಲ್ಪನೆಗಳ ಪ್ರಯೋಗಾತ್ಮಕಾನ್ವಯಿಕತೆಯನ್ನು ಒಂದೆರಡು ಸಾವಿನ ಸಂದರ್ಭಗಳಲ್ಲಿ ನಾನು ಪ್ರತ್ಯಕ್ಷವಾಗಿ ಕಂಡು ನನಗೆ ಹೃದಯ ಕಲಕಿ ಸಂಘದ ಈ ಕಾರ್ಯಕ್ಕೆ ಆನಂದಭಾಷ್ಪ ಸುರಿಸಿದೆನು. ನಮ್ಮ ಬೃಹಚ್ಚರಣ ಸಂಘದ ಈಗಿನ ಪದಾಧಿಕಾರಿಗಳು, ಪದಾಧಿಕಾರಿ ಸಮಿತಿಯ ಇತರ ಸದಸ್ಯರು, ವಿಶೇಷವಾಗಿ ಈ ಪರಿಕಲ್ಪನೆಗಳ ರೂವಾರಿಗಳಾದ ಶ್ರೀಯುತ ಸೋಮಸುಂದರ, ವಿ.ಎಸ್.ಮಣಿ, ಸುಬ್ರಮಣ್ಯಂ, ಮತ್ತು ಸರ್ಜಾಪುರ ಶ್ರೀನಿವಾಸ್ ಇವರುಗಳಿಗೆ ಮತ್ತು ಇತರರಿಗೆ ನಾನು ಹೆಮ್ಮೆ ಮತ್ತು ಸಂತೋಷಗಳಿಂದ ವಿಶೇಷ ಅಭಿನಂದನೆಗಳನ್ನು ಸಲ್ಲಿಸುವೆನು.

**ಪ್ರೊ॥ ಕೆ.ಎಸ್.ಮಧುಸೂದನ**
**9902145359**

# ವಾರ್ಷಿಕ ನಿರ್ವಹಣಾ ವೆಚ್ಚ (ವರ್ಷಕ್ಕೆ ರೂ. 500/-) ನೀಡಿದ ಸದಸ್ಯರು

ಕೃಷ್ಣಮೂರ್ತಿ ಎಸ್.ಎನ್. (350/–)
ವಿದ್ಯಾ ಮೂರ್ತಿ (1000/–)
ಸತ್ಯನಾರಾಯಣ ಎಸ್.
ಮನೋಜ್ ಎಸ್.
ಶುಭಾ ಬಿ.ಸಿ.
ಡಾ|| ಅಮೃತ್ ಕುಮಾರ್ ಎಂ.ಎನ್. (2500/–)
ಮಹೇಶ್ ಆರ್.ಎಸ್.
ಶ್ರೀನಿವಾಸ ಎಸ್.ಸಿ.
ಅನಂತ ಕೆ.ಎಸ್.
ಅರುಣ್ ವಿ.
ಅನ್ನಪೂರ್ಣ ವಿ.
ಅಶೋಕ್ ವಿ.
ಸುಮಾ ಅರುಣ್
ಸೂರಜ್ ಅರುಣ್
ವೇಣುಗೋಪಾಲ್ ಎಚ್.ಪಿ.
ನಯನ್ ಕುಮಾರ್ ಎಸ್.
ರಮೇಶ್ ಆರ್.ಎಸ್.
ರೇಖಾ ರಮೇಶ್
ಸುನಂದಾ ರತನ್
ಸುಬ್ರಮಣ್ಯಂ ಬಿ.
ನಳಿನಿ ಎಸ್.
ನಿರ್ಮಲಾ ಸುಧೀಂದ್ರ
ಶ್ರೀನಿವಾಸ್ ಆರ್.ಎ.
ಕೃಷ್ಣಸ್ವಾಮಿ ಛಾಯಾಪತಿ
ಸವಿತಾ ಪ್ರಸಾದ್
ಗಾಯತ್ರಿ ವಾಸುದೇವನ್
ಭರತ್ ಶರ್ಮ
ಶರ್ಮ ಕೆ.ಬಿ.ಎಸ್.
ನಾಗೇಶ
ಗುಂಡಪ್ಪ ಕೆ.
ಲೀಲಾವತಿ ಜಿ.
ಸೋಮಸುಂದರ ಎಸ್.
ಚಂದ್ರಶೇಖರ್ ಎಸ್.
ಜಯಶ್ರೀ ಎಸ್.
ಡಾ|| ರಮಾದೇವಿ ಎಸ್.

ರಘುನಂದನ ಎಸ್,
ಸತ್ಯನಾರಾಯಣ ಬಿ.ಎಲ್.
ಡಾ|| ಶ್ರೀಧರ್ ರಾಮಚಂದ್ರನ್
ಸುಂದರನ್ ಪಿ.
ರಾಜೇಶ್ವರಿ ಆರ್.
ರಘುನಂದನ್ ಜೆ.ವಿ.
ಗಣೇಶನ್ ಎನ್.
ಶಶಿಧರ್ ಹೆಚ್.ಕೆ.
ರಾಮಕೃಷ್ಣ ಸಿ.
ಸುನಂದ ಗೋವಿಂದರಾಜು
ಶೀನಿವಾಸನ್ ಎ.ವಿ.
ಶಾಂತಾರಾಮ್ ವಿ.
ಮುತ್ತುಸ್ವಾಮಿ ಜಿ.
ಮಣಿ ವಿ.ಎಸ್.
ಮಾತಂಗ್ ಶೇಷಗಿರಿ
ಯಶೋಧರ ಉಡುಪ
ನಾಗರತ್ನಮ್ಮ ಡಿ.ಸಿ.
ಅಶ್ವಥ್ ಎನ್.
ಸುಜಾತಾ ಶ್ರೀನಿವಾಸ್
ಜಯರಾಮನ್ ಬಿ.ವಿ.
ರಮಾ ದೇವಿ ಕೆ.ಆರ್.
ಡಾ|| ಸುಮಾ ಸರಾಫ್
ವೆಂಕಟಸುಬ್ಬಯ್ಯ ಕೆ.
ವಾಸು ಎಸ್.
ಸೂರ್ಯಕುಮಾರಿ ಹೆಚ್.ಪಿ.
ಭಗವಾನ್ ಆರ್.
ಉದಯ್ ಬಿ. ರಾಜಾಪುರ್
ಸಂಜಯ್ ರಾಜಾಪುರ್
ಅಜಯ್ ಆರ್.ಬಿ.
ಚಂಪಕ್ ಟಿ.ಎಸ್.
ಶಶಿಕಲಾ ಪಿ.
ಶ್ರೀನಿವಾಸ ಮೂರ್ತಿ ಸಿ.ಎಸ್.
ವೆಂಕಟಸುಬ್ಬರಾವ್ ಆರ್.ಎನ್.
ಮಂಜುನಾಥ್ ಆರ್.ಎನ್.
ರಾಧಾಕೃಷ್ಣ ಎಸ್.ಆರ್.
ಶೇಷಾದ್ರಿ ಎಸ್.ವಿ.

ಮೋಹನ್ ಎಸ್.
ಗಾಯತ್ರಿ ದೇವಿ ಡಿ.ಎನ್.
ಶೇಷಾದ್ರಿ ಬಿ.ವಿ.
ಜಗದೀಶ್ ಸುಬ್ಬರಾಮಯ್ಯ
ಶಾಂತಾ ಕೆ.ಎಲ್.
ಭಾನುಮತಿ
ರಂಗನಾಥ್ ಪ್ರಸಾದ್
ರಾಮೇಶ್ವರ ಪ್ರಸಾದ್ ಬಿ.ಎಸ್.
ರಾಧಾ ನಾಗಭೂಷಣ್ ಶಾಸ್ತ್ರೀ
ಶ್ರೀನಿವಾಸನ್ ಕೆ.ಎಸ್.
ಮೋಹನ್ ಆರ್.ಪಿ.
ಬಾಲಸುಬ್ರಮಣಿ ಎಸ್.
ಶ್ರೀನಿವಾಸ್ ಕೆ.ಜಿ.
ಅಜಯ್ ಕುಮಾರ್ ಎನ್.
ಹರ್ಷ ನಾಗರಾಜ್
ಮಣಿ ಗುಂಜೂರ್
ಕುಮಾರ್ ಆರ್ ಎನ್.
ರಘು ಟಿ ಎನ್.
ರಘುಕುಮಾರ್ ಜಿ.
ಗಣಪತಿ ಆರ್.
ಪದ್ಮನಾಭನ್ ಆರ್.ಎಸ್.
ಚಂದ್ರಶೇಖರ್ ಕೆ.
ರವಿ ಪ್ರಕಾಶ್ ಎಸ್.
ಸೂರ್ಯನಾರಾಯಣ ಬಿ.ಎಸ್.
ಭಾಸ್ಕರ್ ಡಿ.ಎಸ್.
ನಾಗವೇಣಿ ಭಾಸ್ಕರ್
ನಕುಲ್ ಭಾಸ್ಕರ್
ನಿತಿನ್ ಭಾಸ್ಕರ್
ಪೂರ್ಣಿಮಾ ಎಸ್.
ಗಣೇಶ ಶ್ರೀಧರ್ ಆರ್.
ಅಭಯ್ ಶ್ರೀಧರ್
ರೂಪಶ್ರೀ ಎಂ.
ನಾಗಭೂಷಣ
ಅಟ್ಟೂರು ರಾಮಕೃಷ್ಣ ಶರ್ಮ
ಅರುಣ್ ಕುಮಾರ್ ಆರ್.ಪಿ. (1000/–)

# ಅನ್ನ ಸಂತರ್ಪಣಾ ನಿಧಿಗೆ ದೇಣಿಗೆ ನೀಡಿದ ಸದಸ್ಯರು/ಸಮುದಾಯದವರು (ರೂ. ಗಳಲ್ಲಿ)

| | |
|---|---|
| ನಾಗೇಶ | 5000/– |
| ಸತ್ಯನಾರಾಯಣ ಎಸ್. | 5000/– |
| ರಮೇಶ್ ಆರ್.ಎಸ್. | 7000/– |
| ಗುರುಪ್ರಸಾದ್ ಆರ್.ಎಸ್. | 5000/– |
| ಶೇಷಾದ್ರಿ ಬಿ.ವಿ. | 5000/– |
| ಶರ್ಮ ಕೆ.ಬಿ.ಎಸ್. | 5000/– |
| ಶ್ರೀನಿವಾಸ ಬಿ.ಎ. | 1000/– |
| ಸುಬ್ರಹ್ಮಣ್ಯಂ ಬಿ. | 5000/– |
| ರಾಜಣ್ಣ ಕೆ. | 5000/– |
| ರವಿಶಂಕರ್ ಎಂ.ಆರ್. | 1500/– |
| ಗುಂಡಪ್ಪ ಕೆ. | 5000/– |
| ಶರ್ಮ ಟಿ.ವಿ.ಎಸ್. | 5000/– |
| ಸೋಮಸುಂದರ ಎಸ್. | 5000/– |
| ಕಾವ್ಯ ಕುಮಾರ್ | 500/– |
| ನವ್ಯಾ ಕುಮಾರ್ | 501/– |
| ಅರುಣ್ ವಿ. | 3000/– |
| ನಟರಾಜ ಬಿ.ಸಿ. | 2000/– |
| ಈಶ್ವರನ್ ಎ. | 8000/– |
| ಅರುಣ್ ಹೆಚ್.ಜಿ. | 5000/– |
| ವೆಂಕಟೇಶ್ ಆರ್.ಎಸ್. | 2000/– |
| ಶ್ರೀನಿವಾಸ ಎಸ್.ಸಿ & ರಾಘವ ಪ್ರಸಾದ್ ಎಸ್.ಸಿ. | 5000/– |
| ಸೂರ್ಯನಾರಾಯಣ ಜಿ.ಎಸ್. | 1001/– |
| ನಾಗರತ್ನ ಜಿ.ಎಸ್. | 500/– |
| ಪದ್ಮ ನಾಗರಾಜ್ ಜಿ.ಎಸ್. | 500/– |
| ಜಾನಕಿರಾಮ್ ಜಿ.ಎಸ್. | 500/– |
| ರಾಜೇಶ್ವರಿ ಆರ್. | 100/– |
| ಗೋವಿಂದ ಪ್ರಸಾದ್ ಬಿ.ಎನ್. & ಕುಮಾರ್ ಬಿ.ಎನ್.ಜಿ. | 10000/– |
| ಗಣೇಶನ್ ಎನ್. | 2000/– |
| ಶೇಖರ್ ಕೆ.ಸಿ. | 10000/– |
| ಪದ್ಮ ನಾಗರಾಜ್ (ನಾಗಾರಾಧನೆ) | 1000/– |
| ಶ್ರೀನಿವಾಸನ್ ಎ.ವಿ. | 500/– |
| ಮಣಿ ವಿ.ಎಸ್. | 5000/– |
| ಅಶ್ವತ್ಥ್ ಎನ್. | 1500/– |
| ನಾಗರತ್ನಮ್ಮ ಡಿ.ಸಿ. | 1000/– |
| ಗಾಯತ್ರಿ ದೇವಿ | 1000/– |
| ಪ್ರಹ್ಲಾದ್ ಎ ಸರಾಫ್ | 1000/– |
| ಉಮೇಶ್ ಎಸ್. | 5000/– |
| ರಾಧಾಕೃಷ್ಣ ಎಸ್.ಆರ್ | 500/– |
| ಜಗದೀಶ್ ಸುಬ್ಬರಾಮಯ್ಯ | 2001/– |
| ಶಾಂತಾ ಕೆ.ಎಲ್. | 500/– |
| ಶಿವಕುಮಾರ್ ಕೆ.ಎಸ್. | 501/– |
| ತಾರಾ ರವೀಂದ್ರ | 1000/– |
| ಲತಾ ಎಸ್.ಆರ್. | 1000/– |
| ರೂಪ ವಿಶ್ವೇಶ್ | 1000/– |
| ರಮಾ ಸುಬ್ಬ ರಾವ್ | 1000/– |
| ಸೂರ್ಯ ಪ್ರಕಾಶ್ (ಮಾಲತಿ) | 2000/– |
| ಮೋಹನ್ ಆರ್.ಪಿ. | 500/– |
| ಬಾಲಸುಬ್ರಮಣಿ ಎಸ್. | 500/– |
| ಶ್ರೀನಿವಾಸ ಕೆ.ಜಿ. | 500/– |
| ಪದ್ಮ ನಾಗರಾಜ್ | 2000/– |
| ವಿಜಯದೇವ್ ಎಸ್. | 1000/– |
| ಶೇಷಾದ್ರಿ ಎಸ್.ವಿ. | 4500/– |
| ರಾಜನ್ ವಿ.ಜಿ. ಕರ್ನಲ್ | 1000/– |
| ಕಾರ್ತಿಕ್ ರವಿ | 100/– |
| ಶ್ರೀಕಂಠೇಶ್ವರ (ಅರವಿಂದ) | 500/– |
| ಸೂರ್ಯನಾರಾಯಣ ಬಿ.ಎಸ್. | 10000/– |
| ಗಣೇಶ ಶ್ರೀಧರ್ ಆರ್. | 1500/– |
| ಸತ್ಯನಾರಾಯಣ ಬಿ.ಎಲ್. | 2000/– |
| ಸರಸ್ವತಿ ಕೆ. | 500/– |
| ಹರಿಪ್ರಸಾದ್ ಆರ್.ಎನ್. | 500/– |
| ವಿಜಯಕುಮಾರ್ ಎಸ್.ಆರ್. | 500/– |

## ವಿದ್ಯಾನಿಧಿಗೆ ದೇಣಿಗೆ ನೀಡಿದ ದಾನಿಗಳು

| | |
|---|---|
| ಶ್ರೀಹರಿ ಉಡುಪ | ರೂ. 25000/– |

## ಕ್ಯಾಲೆಂಡರ್‌ಗೆ ದೇಣಿಗೆ ನೀಡಿದ ಸದಸ್ಯರು

| | |
|---|---|
| ರಘು ಟಿ.ಎನ್. | ರೂ. 1500/– |

## ಪ್ರತಿಭಾ ಪುರಸ್ಕಾರಕ್ಕೆ ದೇಣಿಗೆ ನೀಡಿದ ಸದಸ್ಯರು/ಸಮುದಾಯದವರು (ರೂ. ಗಳಲ್ಲಿ)

| | |
|---|---|
| ಗಣೇಶ ಶ್ರೀಧರ್ ಆರ್. | 2000/– |
| ಶ್ಯಾಮಸುಂದರ್ ಆರ್.ಎ. | 2000/– |
| ನಾಗೇಶ | 2000/– |
| ಶ್ರೀನಿವಾಸ ಎಸ್.ಸಿ. | 2000/– |
| ರಾಜಲಕ್ಷ್ಮಿ ಆರ್. | 2000/– |
| ವೆಂಕಟೇಶ್ ಆರ್.ಎಸ್. | 4000/– |
| ವೆಂಕಟೇಶ ಪ್ರಸಾದ್ ಆರ್. | 2000/– |
| ಸುಮಾ ಗೋಪಾಲ್ | 2000/– |
| ಮಂಜುನಾರಾಯಣ ಕೆ. | 2000/– |
| ವಿದ್ಯಾ ರವಿಶಂಕರ್ | 2000/– |
| ಮೋಹನ್ ಆರ್.ಪಿ | 2000/– |
| ಡಾ|| ಶ್ರೀಧರ್ ರಾಮಚಂದ್ರನ್ | 2000/– |
| ರಶ್ಮಿ ಶ್ರೀಧರ್ | 2000/– |
| ಅಥರ್ವ ಕಶ್ಯಪ್ | 2000/– |
| ಮನೋಜ್ ಎಸ್. | 2000/– |
| ಶ್ರೀನಿವಾಸ ಎನ್. | 2000/– |
| ಮೇಘಾ ಎಂ. | 2000/– |
| ರಮೇಶ್ ಆರ್.ಎಸ್. | 2000/– |
| ಡಾ|| ರಮಾದೇವಿ ಎಸ್. | 4000/– |
| ನಿರ್ಮಲಾ ಸುಧೀಂದ್ರ | 2000/– |
| ರಘುನಂದನ ಎಸ್. | 4000/– |
| ಶಂಕರ್ ಪ್ರಸಾದ್ ಬಿ.ಆರ್. | 2000/– |
| ಸುರೇಶ್ ಕೆ.ಬಿ. | 2000/– |
| ಸತ್ಯಪ್ರಸಾದ್ ಎಸ್.ಆರ್. | 2000/– |
| ನಾಗರತ್ನ ಜೆ.ಆರ್. | 2000/– |
| ಶ್ರೀನಿವಾಸ್ ಬಿ.ಎ. | 3000/– |
| ಸೂರ್ಯಪ್ರಕಾಶ್ ಬಿ.ಎ. | 2000/– |
| ಸೂರ್ಯನಾರಾಯಣ ಟಿ.ಪಿ. | 2000/– |
| ಗುಂಡಪ್ಪ ಕೆ. | 2000/– |
| ರವಿಶಂಕರ್ ಆರ್.ಪಿ. | 2000/– |
| ಅಶ್ವಿನಿ ವೆಂಕಟೇಶ್ | 2000/– |
| ಸತ್ಯಮೂರ್ತಿ ಡಿ. | 2000/– |
| ಶೈಲೇಶ್ ಎಸ್. | 2000/– |
| ಅರುಣ್ ವಿ. | 2000/– |
| ನಟರಾಜ ಬಿ.ಸಿ. | 2000/– |
| ರಾಹುಲ್ ಶ್ರೀನಿವಾಸ | 2000/– |
| ಈಶ್ವರನ್ ಎ. | 2000/– |
| ಶಶಿಧರ್ ಹೆಚ್.ಕೆ. | 2000/– |
| ಉಮಾ ಎನ್. ಗೋವಿಂದ್ | 1000/– |
| ಮಣಿ ವಿ.ಎಸ್. | 2000/– |
| ಜ್ಯೋತಿ ಸೂರ್ಯನಾರಾಯಣ | 2000/– |
| ಮೋಹನ್ ಎಸ್. | 5000/– |
| ಪದ್ಮಾ ನಾಗರಾಜ್ | 2000/– |
| ಶೇಷಾದ್ರಿ ಎಸ್.ವಿ. | 2000/– |

## ಸಾಂತ್ವನ ನಿಧಿಗೆ ದೇಣಿಗೆ ನೀಡಿದ ಸದಸ್ಯರು ಮತ್ತು ಸಮುದಾಯದವರು (ರೂ. ಗಳಲ್ಲಿ)

| | |
|---|---|
| ರಾಜಲಕ್ಷ್ಮಿ ಆರ್. | 5000/– |
| ರುಕ್ಮಿಣಿ ಸುಬ್ಬಣ್ಣ | 10000/– |
| ಮಾನಸಾ | 10000/– |
| ಮನೋಜ್ ಎಸ್. | 10000/– |
| ಸತ್ಯನಾರಾಯಣ ಎಸ್. | 25000/– |
| ರಘು ಕುಮಾರ್ ಜಿ. | 5000/– |

**ಸಾಂತ್ವನ ನಿಧಿಗಾಗಿ ಈ ಖಾತೆಗೆ ಹಣವನ್ನು ವರ್ಗಾಯಿಸಬಹುದು**

**Bank Details:**

**Mysore Manjapattur Dravida Bruhachharana Sangha**
**A/c No: 110101195949, IFSC: CNRB 0000883**
**CANARA BANK, Sarakki Branch,**
**UPI ID NO: 90574090195949@cnrb**

## ಅಭಿನಂದನೆಗಳು



ಸಂಘದ ಆಂತರಿಕ ಲೆಕ್ಕಪರಿಶೋಧಕ ಮತ್ತು ಛಾಯಾಗ್ರಾಹಕರಾದ ಶ್ರೀ ಎನ್, ಶಿವಕುಮಾರ್‌ರವರಿಗೆ 2022–23ನೆ ಸಾಲಿನ ನಾಲ್ಕನೆಯ ವಾರ್ಷಿಕ ಸ್ಪರ್ಧೆ ಮತ್ತು ಛಾಯಾಚಿತ್ರ ಪ್ರದರ್ಶನದಲ್ಲಿ "ಸ್ಟಾರ್ ಫೋಟೋಗ್ರಫಿ ಅವಾರ್ಡ್" ನೇಚರ್ ಮತ್ತು ವೈಲ್ಡ್ ಫೋಟೋಗ್ರಫಿ ಗ್ರೂಪ್‌ನಿಂದ ದೊರಕಿದೆ.

***************************

ಸದಸ್ಯ ಶ್ರೀ ಆರ್.ಎಸ್. ಪ್ರಶಾಂತ್ ಮತ್ತು ಶ್ರೀಮತಿ ನಳಿನಿ ದಂಪತಿಗಳ ಪುತ್ರಿ ಕುಮಾರಿ ವಾಗ್ದೇವಿ ದಿನಾಂಕ 28.4.2023ರಂದು ಕೊಳಲು ಕಾರ್ಯಕ್ರಮ ನೀಡಿ ಹರಿಹರಪುರ ಮಠದ ಶ್ರೀ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತಿ ಸ್ವಾಮಿಗಳಿಂದ ಆಶೀರ್ವಾದ ಪಡೆದಿದ್ದಾಳೆ.



***************************



ಸಂಘದ ಖಜಾಂಚಿ ಶ್ರೀ ವಿ.ಅರುಣ್‌ರವರಿಗೆ "Business Network International" ಅವರ ಜೂನ್ ಮಾಸದ ಫೆಲೋ ಸದಸ್ಯರ ಅತ್ಯಧಿಕ ವಹಿವಾಟಿಗಾಗಿ ಪ್ರಮಾಣ ಪತ್ರ ದೊರಕಿದೆ.

***************************

ಸದಸ್ಯ ಶ್ರೀ ಬಿ.ಎ. ಶ್ರೀನಿವಾಸ್‌ರವರ ಪುತ್ರಿ ಕುಮಾರಿ ಬಿ.ಎಸ್. ಸುರಭಿಯವರು ದಿ ಬೆಂಗಳೂರು ಸಿಟಿ ಯೂನಿವರ್ಸಿಟಿ ಬಿ.ಎಸ್.ಸಿ.ಯ "ಫ್ಯಾಷನ್ ಮತ್ತು ಅಪೆರೆಲ್ ಡಿಸೈನ್ ಸ್ಟ್ರೀಮ್" ವಿಭಾಗದಲ್ಲಿ ಮೊದಲನೆ ರ್‍ಯಾಂಕ್ ಗಳಿಸಿರುತ್ತಾರೆ.



***************************



ಸದಸ್ಯ ಶ್ರೀ ಆರ್. ಬಿ. ಅಜೇಯ್‌ರವರ ಪುತ್ರಿ ಕುಮಾರಿ ಶ್ರದ್ಧಾರವರು "ರಾಷ್ಟ್ರೀಯ ಯೋಗ ದಿನ" ಅಂಗವಾಗಿ ನಡೆದ ಕರ್ನಾಟಕ ರಾಜ್ಯದ ಯೋಗ ಸ್ಪರ್ಧೆಗಳಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿ ಪ್ರಶಸ್ತಿ ಪ್ರಮಾಣ ಪತ್ರ ಪಡೆದಿರುತ್ತಾಳೆ.



***************************



ಸಂಘದ ಕಾರ್ಯಕಾರಿ ಸಮಿತಿ ಹಿರಿಯ ಸದಸ್ಯ ಶ್ರೀ ಕೆ. ಗುಂಡಪ್ಪರವರ ಪುತ್ರ ಸದಸ್ಯ ಕಂಜಿರ ವಿದ್ವಾನ್ ಶ್ರೀ ಗುರುಪ್ರಸನ್ನ ಮತ್ತು ಪತ್ನಿ ಶ್ರೀಮತಿ ಪಲ್ಲವಿರವರು ಸಂಗೀತದ ಮೇಲಿನ ಶ್ರದ್ಧೆ ಮತ್ತು ಅಭಿಮಾನದಿಂದ ಸ್ಥಾಪಿಸಿದ "ಸಮತ್ವ" ಫೌಂಡೇಶನ್ ಅಂಗವಾಗಿ ದಿನಾಂಕ 5.8.2023 ಮತ್ತು 6.8.2023ರಂದು ನಡೆದ ಸಂಗೀತ ಕಾರ್ಯಕ್ರಮಗಳನ್ನು ವಿಭಿನ್ನ ಶೈಲಿಯಲ್ಲಿ ಬೆಂಗಳೂರಿನಲ್ಲಿ ಆಯೋಜಿಸಿದ್ದರು.

**ಸಂಘವು ಈ ಪ್ರತಿಭೆಗಳನ್ನು ಅಭಿನಂದಿಸಿ ಹಾರೈಸುತ್ತದೆ.**

# ವಿವಾಹ



ಸಂಘದ ಸದಸ್ಯ ಶ್ರೀ ಡಿ.ಎಂ. ಶೇಖರ್ ಮತ್ತು ಶ್ರೀಮತಿ ಕೆ. ಶಾಂತರವರ ಪುತ್ರ ಚಿ. ಮುತ್ತುರಾಜರವರ ವಿವಾಹವು ಶ್ರೀಮತಿ ಎನ್.ಎಸ್. ಜ್ಞಾನೇಶ್ವರಿ ಮತ್ತು ಶ್ರೀ ಆರ್. ರಾಘವೇಂದ್ರರವರ ಪುತ್ರಿ ಚಿ. ಸಂಧ್ಯಾರಾಣಿರವರೊಂದಿಗೆ 27.4.2023ರಂದು ಬೆಂಗಳೂರಿನಲ್ಲಿ ನೆರವೇರಿತು.

***************************************************



ಸಂಘದ ಸದಸ್ಯ ಶ್ರೀ ಹೆಚ್.ಆರ್. ಬದರಿನಾರಾಯಣ್ ಮತ್ತು ಶ್ರೀಮತಿ ಎನ್. ವಾಗ್ದೇವಿಯವರ ಪುತ್ರಿ ಡಾ॥ ಮೇಘನಾ ಬಿ. ನಾರಾಯಣ್‌ರವರ ವಿವಾಹವು ಶ್ರೀಮತಿ ವಿಜಯಲಕ್ಷ್ಮಿ ಮತ್ತು ಶ್ರೀ ರಾಜೀವರವರ ಪುತ್ರ ಚಿ. ಅಕ್ಷಯ್ ರಾಜೀವರೊಂದಿಗೆ ದಿನಾಂಕ 11–5–2023ರಂದು ಬೆಂಗಳೂರಿನಲ್ಲಿ ನೆರವೇರಿತು.

***************************************************************************************



ಸಂಘದ ಪೋಷಕ ಶ್ರೀ ಎ. ಈಶ್ವರನ್ ಮತ್ತು ಶ್ರೀಮತಿ ಎಸ್. ಸವಿತಾರವರ ಪುತ್ರಿ ಚಿ. ಸಹನ ಈಶ್ವರನ್‌ರವರ ವಿವಾಹವು ಶ್ರೀಮತಿ ಸಾಯಿ ಸುಧಾ ಮತ್ತು ಶ್ರೀ ಎಸ್. ಚಂದ್ರಶೇಖರನ್‌ರವರ ಪುತ್ರ ಚಿ. ಅಜೇಯ್ ಚಂದ್ರಶೇಖರನ್ ರವರೊಂದಿಗೆ ದಿನಾಂಕ 24.5.2023 ರಂದು ಬೆಂಗಳೂರಿನಲ್ಲಿ ನೆರವೇರಿತು.

ಇದೇ ಸಂದರ್ಭದಲ್ಲಿ ಶ್ರೀ ಈಶ್ವರನ್‌ರವರು ಸಂಘದ ಚಟುವಟಿಕೆಗಳಿಗೆ ರೂ. 10000/– ಗಳನ್ನು ದೇಣಿಗೆ ನೀಡಿರುತ್ತಾರೆ.

ಸಂಘವು ನವ ದಂಪತಿಗಳಿಗೆ ಶುಭ ಹಾರೈಸುತ್ತದೆ.

*If undelivered please return to :*
*President*
**'Bruhacharana Sangha'**
No. 27/1, Bull Temple Road,
Basavanagudi,
Bengaluru - 560 004.
E-mail : magazines@mmdbs.in
Website : mmdbs.in

To,

Book-Post

**Published by Sri S. Somasundara, President, 'BRUHACHARANA SANGHA', No. 8, 3rd Cross, Annayyappa Block, Kumara Park West, Bengaluru - 560 020.**
**Printed at Hamsanikethan Prints, No. 126, C.T. Bed, 6th Cross Rd, Banashankari Stage II, Banashankari, Bengaluru - 560070**